# ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

ಸಂಪಾದಕ : ಮಂಜು ಬನವಾಸೆ

KANNADA POST

ಕನ್ನಡ ದಿನ ಪತ್ರಿಕೆ Kannada Daily

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.01 | Issue. 200 | Pages. 2 | Date: 18-06-2025, WEDNESDAY | RNI NO: KARKAN/2024/89601

ಸಂಪುಟ : 01 - ಸಂಚಿಕೆ : 200 - ಪುಟಗಳು : 2 - 18 ಜೂನ್ 2025 ಬುಧವಾರ | Ph: 8762954248 | ದರ : ₹1


## ಜಿಲ್ಲಾಧಿಕಾರಿ ಸಿ. ಸತ್ಯಭಾಮ ವರ್ಗಾವಣೆ



ಹಾಸನ: ಜಿಲ್ಲಾಧಿಕಾರಿ ಸಿ. ಸತ್ಯಭಾಮ ಅವರನ್ನು ವರ್ಗಾವಣೆ ಮಾಡಿ ರಾಜ್ಯ ಸರ್ಕಾರ ಮಂಗಳವಾರ ಆದೇಶಿಸಿದೆ. ನೂತನ ಜಿಲ್ಲಾಧಿಕಾರಿಯಾಗಿ ಕೆ.ಎಸ್. ಲತಾಕುಮಾರಿ ಅವರನ್ನು ನೇಮಕ ಮಾಡಲಾಗಿದೆ. ಲತಾಕುಮಾರಿ ಅವರು ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯನಿರ್ವಹಣಾಧಿಕಾರಿ ಆಗಿದ್ದರು. ಸಿ. ಸತ್ಯಭಾಮ ಅವರಿಗೆ ಸಮಗ್ರ ಶಿಕ್ಷಣ ರಾಜ್ಯ ಯೋಜನಾ ನಿರ್ದೇಶಕ ಸ್ಥಾನ ನೀಡಲಾಗಿದೆ.

# ಮಲೆನಾಡಿನಲ್ಲಿ ಮುಂದುವರೆದ ವರುಣಾರ್ಭಟ

## ಶಿರಾಡಿ ಘಾಟ್‌ನಲ್ಲಿ ಭೂ ಕುಸಿತ | ಮನೆ ಖಾಲಿ ಮಾಡಿದ ಕುಟುಂಬ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ಮಲೆನಾಡು ಭಾಗದಲ್ಲಿ ವರುಣಾರ್ಭಟ ಮುಂದುವರೆದಿದ್ದು ಜನರು ಪರದಾಡುವಂತಾಗಿದೆ.

ಜತೆಗೆ ರಾಷ್ಟ್ರೀಯ ಹೆದ್ದಾರಿ 75ರ ಅಲ್ಲಲ್ಲಿ ಭೂಕುಸಿತ ಉಂಟಾಗಿ ಭೀತಿ ಹೆಚ್ಚಿದ್ದು ಮಣ್ಣಿನ ಜೊತೆಗೆ ಮರಗಳು ಧರಾಶಾಹಿತಾಗುತ್ತಿವೆ. ಕಳೆದ ನಾಲ್ಕು ದಿನಗಳಿಂದ ಮಳೆ ಜೋರಾಗಿ ಸುರಿಯುತ್ತಿದೆ. ತಾಲ್ಲೂಕಿನ ಹೆಗ್ಗದ್ದೆ ಬಳಿ ಭೂಮಿ ಕುಸಿಯುತ್ತಲೇ ಇದ್ದು ಮನೆ, ಚರ್ಚ್‌ಗೆ ತೆರಳುವ ರಸ್ತೆ ಬಂದ್ ಆಗಿದೆ. ಮೂರ್ನಾಲ್ಕು ದಿನಗಳ ಹಿಂದೆಯೇ ಹೆಗ್ಗದ್ದೆ ನಿವಾಸಿ ಯಶಸ್ವಿ ಎಂಬುವವರು ಮನೆಗೆ ರಸ್ತೆ ಸಂಪರ್ಕ ಇಲ್ಲದ ಕಾರಣ ಹಾಗೂ ನೀರಿನ ಸರಬರಾಜು ಸ್ಥಗಿತ ಮತ್ತು ಗುಡ್ಡ ಕುಸಿತದ ಭಯದಿಂದ ಕುಟುಂಬ ಸಮೇತ ಮನೆ ಖಾಲಿ ಮಾಡಿ ಬೇರೆಡೆಗೆ ತೆರಳಿದ್ದಾರೆ.

ಮತ್ತೊಂದೆಡೆ ನಿತ್ಯ ಸುರಿಯುತ್ತಿರುವ ಮಳೆಗೆ ಮನೆ, ಚರ್ಚ್, ಟವರ್ ಕುಸಿಯುವ ಭೀತಿ ಎದುರಾಗಿದೆ. ಒಂದು ಭಾಗದಲ್ಲಿ ರಸ್ತೆ ಸಂಚಾರ ಬಂದ್ ಮಾಡಿ ಮಣ್ಣು ತೆರವು ಕಾರ್ಯಾಚರಣೆ ನಡೆಯುತ್ತಿದ್ದು, ಇನ್ನೊಂದೆಡೆ ಮಳೆಯ ಆರ್ಭಟಕ್ಕೆ ಗುಡ್ಡ ಕುಸಿಯುತ್ತಲೇ ಇದೆ. ಮಣ್ಣಿನ ಜೊತೆ ಮರ, ಗಿಡಗಳು ರಸ್ತೆಗೆ ಉರುಳುತ್ತಿವೆ.



### ಕುಸಿದ ಹೋಟೆಲ್ ಗೋಡೆ

ಪಟ್ಟಣದ ಬಿ.ಎಂ. ರಸ್ತೆಯ ಸೌದೆ ಒಲೆ ಬಿರಿಯಾನಿ ಹೋಟೆಲ್‌ನ ಗೋಡೆಯೊಂದು ಭಾರೀ ಮಳೆಯಿಂದ ಕುಸಿದಿದೆ. ಕಂದಾಯ ಇಲಾಖೆಯ ಗ್ರಾಮ ನಿರೀಕ್ಷಕ ಸಿದ್ದಲಿಂಗ ಭೇಟಿ ನೀಡಿ ಪರಿಶೀಲಿಸಿದರು.

### ಕುಡುಗರಹಳ್ಳಿಯಲ್ಲಿ ಮರ ತೆರವು

ಕುಡುಗರಹಳ್ಳಿ ಬಡಾವಣೆಯ ಸಂತೋಷ್ ನಗರ ಸಮೀಪ ರಸ್ತೆ ಬದಿಯ ಮರವೊಂದು ವಿದ್ಯುತ್ ತಂತಿಯ ಮೇಲೆ ಬಿದ್ದು, ತಂತಿಯಲ್ಲಿ ಸಿಲುಕಿರುವುದರಿಂದ ಮನೆಯ ಮೇಲೆ ಬೀಳುವುದು ತಪ್ಪಿತು. ಕ್ರೇನ್ ಮೂಲಕ ಮರ ತೆರವುಗೊಳಿಸಲಾಯಿತು. ವಿದ್ಯುತ್ ತಂತಿಗಳು ತುಂಡಾದ ಕಾರಣ ಕುಡುಗರಹಳ್ಳಿ ಮತ್ತು ಸಂತೋಷ್ ನಗರದಲ್ಲಿ ರಾತ್ರಿಯಿಡೀ ವಿದ್ಯುತ್ ಇಲ್ಲದೆ ನಿವಾಸಿಗಳು ತೊಂದರೆ ಅನುಭವಿಸಿದರು.

ಐಗೂರು-ಯಸಳೂರು ರಸ್ತೆಯಲ್ಲಿ ಬಿದ್ದ ಮರವೊಂದು ಕೆಲಕಾಲ ವಾಹನ ಸಂಚಾರಕ್ಕೆ ಅಡ್ಡಿಯಾಯಿತು. ಗ್ರಾಮಸ್ಥರು ಮರವನ್ನು ತೆರವುಗೊಳಿಸಿದ್ದಾರೆ. ಆಲುವಳ್ಳಿ ಗ್ರಾಮದ ಧರ್ಮೇಗೌಡರ ಮನೆಯ ಹಂಚುಗಳು ಭಾರೀ ಮಳೆ ಮತ್ತು ಗಾಳಿಗೆ ಹಾರಿಹೋಗಿವೆ.

ಬಾಳ್ಳುಪೇಟೆಯ ಜೆ.ಪಿ. ನಗರದ ನಾರಾಯಣರ ಮನೆಯ ಶೌಚಾಲಯದ ಮೇಲೆ ಮರ ಬಿದ್ದಿದ್ದು, ಅದೃಷ್ಟವಶಾತ್ ಯಾವುದೇ ಹಾನಿಯಾಗಿಲ್ಲ.

### ವಿದ್ಯುತ್ ವ್ಯತ್ಯಯ

ಭಾರೀ ಮಳೆ ಮತ್ತು ಗಾಳಿಯಿಂದ ತಾಲ್ಲೂಕಿನಾದ್ಯಂತ ವಿದ್ಯುತ್ ವ್ಯತ್ಯಯವಾಗಿದ್ದು, ಹಲವು ಗ್ರಾಮಗಳು ಕತ್ತಲಿನಲ್ಲಿ ಮುಳುಗಿವೆ. ಮುಂದಿನ ದಿನಗಳಲ್ಲಿ ಮಳೆ ಮುಂದುವರಿದರೆ ಈ ಸಮಸ್ಯೆ ತೀವ್ರವಾಗಬಹುದು.

ಒಟ್ಟಾರೆ, ಭಾರೀ ಮಳೆಯಿಂದ ತಾಲೂಕಿನಲ್ಲಿ ಶೀತ ವಾತಾವರಣ ನಿರ್ಮಾಣವಾಗಿದೆ, ಎಡೆಬಿಡದ ಮಳೆಯಿಂದಾಗಿ ಕೃಷಿ ಚಟುವಟಿಕೆಗಳು ಸ್ಥಗಿತಗೊಂಡಿದೆ. ಯಸಳೂರು ಹೋಬಳಿಯ ಐಗೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಲ್ಲೂರು ಗ್ರಾಮದಲ್ಲಿ ರಸ್ತೆಗೆ ಮರ ಬಿದ್ದು ಸಂಚಾರಕ್ಕೆ ಕೆಲಕಾಲ ಅಡ್ಡಿಯಾಯಿತು.

### ವಾಹನ ಸಂಚಾರಕ್ಕೆ ತೊಂದರೆ ಇಲ್ಲ

ಶಿರಾಡಿ ಘಾಟ್‌ನಲ್ಲಿ ಲಘು ಭೂಕುಸಿತವಾಗಿ ಕೆಲಕಾಲ ವಾಹನ ಸಂಚಾರಕ್ಕೆ ಅಡ್ಡಿಯಾದ ಘಟನೆ ನಡೆದಿದೆ. ದೊಡ್ಡತಪ್ಪಲೆ ಹಾಗೂ ಕಪ್ಪಳ್ಳಿ ಸಮೀಪ ಸೋಮವಾರ ಮಧ್ಯರಾತ್ರಿ ಭೂಕುಸಿತವಾಗಿ ಸುಮಾರು ಮೂರು ಗಂಟೆಗಳ ಕಾಲ ವಾಹನ ಸಂಚಾರಕ್ಕೆ ತೊಂದರೆಯಾಯಿತು. ಮಂಗಳವಾರ ಮುಂಜಾನೆ ಮತ್ತೊಂದು ಭೂಕುಸಿತವಾಗಿ ಎರಡು ಗಂಟೆಗಳ ಕಾಲ ಸಂಚಾರಕ್ಕೆ ಅಡ್ಡಿಯಾಯಿತು. ತಕ್ಷಣ ಹಿಟಾಚಿ ಮತ್ತು ಜೆಸಿಬಿ ಯಂತ್ರಗಳ ಮೂಲಕ ಬಿದ್ದ ಮಣ್ಣನ್ನು ತೆರವುಗೊಳಿಸಿ, ಏಕಮುಖ ಸಂಚಾರಕ್ಕೆ ಅನುವು ಮಾಡಿಕೊಡಲಾಯಿತು. ಸ್ಥಳಕ್ಕೆ ಉಪವಿಭಾಗಾಧಿಕಾರಿ ಡಾ. ಶ್ರುತಿ ಭೇಟಿ ನೀಡಿ, ತಡೆಗೋಡೆ ಕುಸಿತ ಭೂಕುಸಿತದಿಂದ ಯಾವುದೇ ರೀತಿಯ ಅನಾಹುತ ಸಂಭವಿಸಿದಂತೆ ಕ್ರಮ ಕೈಗೊಳ್ಳಲು ಗುತ್ತಿಗೆದಾರರು ಹಾಗೂ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

### ಹೇಮಾವತಿಗೆ ಹೆಚ್ಚಿದ ಒಳಹರಿವು

ಜಿಲ್ಲೆಯಲ್ಲಿ ಮಳೆಯ ಆರ್ಭಟ ಮುಂದುವರಿದಿದ್ದು, ಮಲೆನಾಡು ಭಾಗದಲ್ಲಿ ನಿರಂತರವಾಗಿ ಮಳೆಯಾಗುತ್ತಿದೆ. ಸಕಲೇಶಪುರ, ಆಲೂರು, ಹಾಸನ, ಬೇಲೂರು ಭಾಗದಲ್ಲಿ ಬಿರುಗಾಳಿ ಸಹಿತ ಮಳೆಯಾಗುತ್ತಿದೆ. ಜಿಲ್ಲೆಯ ಬಹುತೇಕ ಕಡೆ ಮೋಡಕವಿದ ವಾತಾವರಣವಿದೆ. ಸಕಲೇಶಪುರ, ಚಿಕ್ಕಮಗಳೂರು ಭಾಗದಲ್ಲಿ ಭಾರೀ ಮಳೆ ಹಿನ್ನೆಲೆಯಲ್ಲಿ ಹೇಮಾವತಿ ಜಲಾಶಯಕ್ಕೆ ಒಳಹರಿವು ಹೆಚ್ಚಾಗಿದೆ. ಹೇಮಾವತಿ ಜಲಾಶಯಕ್ಕೆ ಒಟ್ಟು 8276 ಕ್ಯೂಸೆಕ್ ನೀರು ಹರಿದು ಬರುತ್ತಿದ್ದು, ನದಿ, ನಾಲೆಗಳು ಸೇರಿ 350 ಕ್ಯೂಸೆಕ್ ನೀರನ್ನು ಹೊರ ಬಿಡಲಾಗುತ್ತಿದೆ.



### ಹೆತ್ತೂರು ವರದಿ

ಹೋಬಳಿಯ ಐಗೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಲ್ಲೂರು ಸಮೀಪ ರಸ್ತೆಗೆ ಮರ ಬಿದ್ದು ಸಂಚಾರಕ್ಕೆ ಕೆಲಕಾಲ ಅಡ್ಡಿಯಾಯಿತು.

ಸೋಮವಾರ ಇಡೀ ರಾತ್ರಿ ಬಿರುಗಾಳಿ ಸಹಿತ ಮಳೆ ಆಗಿತ್ತು. ರಾತ್ರಿ ಗ್ರಾಮೀಣ ಭಾಗದಲ್ಲಿ ವಿದ್ಯುತ್ ವ್ಯತ್ಯಯವಾಗಿತ್ತು. ಪಶ್ಚಿಮ ಘಟ್ಟ ಅಂಚಿನ ಗ್ರಾಮದ ಹಲವೆಡೆ ಮಂಗಳವಾರ ಹಗಲಲ್ಲೂ ವಿದ್ಯುತ್ ಸಂಪರ್ಕ ಇರಲಿಲ್ಲ. ಗಾಳಿ, ಮಳೆ ಕಾರಣಕ್ಕೆ ಕೂಲಿ ಕಾರ್ಮಿಕರು ಕೆಲಸಕ್ಕೆ ರಜೆ ಹಾಕಿ ಮನೆಯಲ್ಲಿ ಕಾಲ ಕಳೆಯುವಂತಾಯಿತು. ಅಡಿಕೆ, ಕಾಫಿ ತೋಟಕ್ಕೆ ಔಷಧ ಸಿಂಪಡಿಸುವ ಕೆಲಸ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ತೊರೆ, ಹಳ್ಳ, ನದಿಗಳಲ್ಲಿ ನೀರಿನ ಹರಿವು ಏರಿಕೆಯಾಗಿದೆ. ಹೋಬಳಿಯ ಬಾಳೆಹಳ್ಳ ಗ್ರಾಮದಲ್ಲಿ ಇದುವರೆಗೆ 30.672 ಸೆ.ಮೀಟರ್ ಮಳೆಯಾಗಿದೆ.

## ಹಾಸನದಲ್ಲಿ ರಾಷ್ಟ್ರೀಯ ಸೌಹಾರ್ದತಾ ದಿನಾಚರಣೆ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಗಾಜಾದಲ್ಲಿ ಇಸ್ರೇಲ್‌ನ ಮಾನವ ಹತ್ಯಾಕಾಂಡ ಖಂಡಿಸಿ ಪ್ಯಾಲೆಸ್ತೇನ್‌ಗೆ ಬೆಂಬಲ ವ್ಯಕ್ತಪಡಿಸಿ ಎಡಪಕ್ಷಗಳಿಂದ ಮಂಗಳವಾರ ರಾಷ್ಟ್ರೀಯ ಸೌಹಾರ್ದತಾ ದಿನಾಚರಣೆ ಆಚರಿಸಲಾಯಿತು. ಸಿಪಿಐ ಮತ್ತು ಸಿಪಿಐಎಂ ನೇತೃತ್ವದಲ್ಲಿ ನಗರದ ಮಹಾವೀರ ವೃತ್ತದಲ್ಲಿ ಘೋಷಣೆ ಕೂಗಲಾಯಿತು. ಸಿಪಿಐಎಂ ಜಿಲ್ಲಾ ಕಾರ್ಯದರ್ಶಿ ಎಚ್.ಆರ್. ನವೀನ್ ಕುಮಾರ್ ಮಾತನಾಡಿ, 2 ವರ್ಷಗಳಿಂದ ಸತತವಾಗಿ ಇಸ್ರೇಲ್ ನಡೆಸುತ್ತಿರುವ ಅನಾಗರಿಕ ಬಾಂಬುಗಳ ದಾಳಿ, ಮಿಲಿಟರಿ ಆಕ್ರಮಣದಿಂದ 55 ಸಾವಿರಕ್ಕೂ ಹೆಚ್ಚಿನ ಪ್ಯಾಲೆಸ್ತೀನಿಯರು ಕೊಲ್ಲಲ್ಪಟ್ಟಿದ್ದಾರೆ. ಲಕ್ಷಾಂತರ ಜನರು ಗಾಯಾಳುಗಳಾಗಿದ್ದಾರೆ. ಅಗತ್ಯ ಆಸ್ಪತ್ರೆಗಳು, ಶಾಲೆಗಳು ಮತ್ತು ನಿರಾಶ್ರಿತ ವಸತಿ ಕೇಂದ್ರಗಳನ್ನು ಗುರಿಯಿಟ್ಟು ದಾಳಿ ಮಾಡಲಾಗುತ್ತಿದೆ. ಇದರಿಂದಾಗಿ ಪ್ಯಾಲೆಸ್ತೀನಿಯರು ಹಿಂದೆಂದೂ ಕಂಡರಿಯದ ಮಾನವ ದುರಂತ ಅನುಭವಿಸುವಂತಾಗಿದೆ. ಇದು ಜನಾಂಗ ಹತ್ಯೆಯಲ್ಲದೆ ಬೇರೇನೂ ಅಲ್ಲ. ಇಂತಹ ಸಂದರ್ಭದಲ್ಲಿ ಗಾಜಾ ಪ್ರದೇಶಕ್ಕೆ ಆಹಾರ ಪದಾರ್ಥಗಳನ್ನೂ ಇಸ್ರೇಲ್ ಬಿಡುತ್ತಿಲ್ಲ ಎಂಬುದು ಆತಂಕಕಾರಿ ಎಂದರು.

ಮೊದಲ ಹಂತದ ಕದನ ವಿರಾಮ ಪೂರ್ಣಗೊಂಡ ಕೂಡಲೇ ಇಸ್ರೇಲ್ ಗಾಜಾ ಮೇಲಿನ ದಾಳಿ ಪುನರಾರಂಭಿಸಿದೆ. ಅಂದಿನಿಂದ ಗಾಜಾಗೆ ಆಹಾರ, ನೀರು, ಇಂಧನ, ನೆರವು ಮತ್ತು ಇತರೆ ಎಲ್ಲಾ ಅಗತ್ಯ ವಸ್ತುಗಳ ಪೂರೈಕೆ ಕಡಿತಗೊಳಿಸಿದೆ. ಗಾಜಾವನ್ನು ಕತ್ತು ಹಿಸುಕಿ ಹಸಿವಿನಿಂದ ಸಾಯುವಂತೆ ಮಾಡಲು ಇಸ್ರೇಲ್ ಉದ್ದೇಶಿಸಿದೆ. ಇದು ಆಸ್ಪತ್ರೆ, ಸಹಾಯ ಬೆಂಗಾವಲು, ವಿಶ್ವ ಸಂಸ್ಥೆಯ ನಿರಾಶ್ರಿತರ ಆಶ್ರಯ ತಾಣ, ಶಾಲೆ, ಮಸೀದಿ ಮತ್ತು ಚರ್ಚ್‌ಗಳ ಮೇಲೆ ದಾಳಿ ನಡೆಸುತ್ತಿದೆ. ಇಸ್ರೇಲ್ ದಾಳಿಯಲ್ಲಿ ಮೃತಪಟ್ಟವರಲ್ಲಿ ಶೇ. 60ರಷ್ಟು ಮಹಿಳೆಯರು ಮತ್ತು ಮಕ್ಕಳು, ಪತ್ರಕರ್ತರು ಮತ್ತು ವಿಶ್ವಸಂಸ್ಥೆಯ ಸಹಾಯ ಕಾರ್ಯಕರ್ತರನ್ನು ಸಹಗುರಿಯಾಗಿಸಿ ಕೊಲ್ಲಲಾಗುತ್ತಿದೆ. ಬೆಳೆಗಳು ನಾಶವಾಗುತ್ತಿವೆ ಇದು ನಿಲ್ಲಬೇಕು ಎಂದರು. ಸಿಪಿಐ ಜಿಲ್ಲಾ ಕಾರ್ಯದರ್ಶಿ ಎಂ.ಸಿ. ಡೋಂಗ್ರೆ, ದಲಿತ ಮುಖಂಡ ಎಚ್.ಕೆ. ಸಂದೇಶ್, ಎಂ.ಜಿ. ಪೃಥ್ವಿ, ಅನ್ಸರ್, ಸಮೀರ್, ಇರ್ಷಾದ್ ಅಹಮದ್ ದೇಸಾಯಿ, ಧರ್ಮರಾಜ್, ಅರವಿಂದ್, ರಮೇಶ್ ಮುಂತಾದವರಿದ್ದರು.

## ಹೆದ್ದಾರಿಯಲ್ಲಿ ಬಸ್ ಶೆಲ್ಟರ್: ಭರವಸೆ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ರಾಷ್ಟ್ರೀಯ ಹೆದ್ದಾರಿಯ ಹಲವು ಭಾಗಗಳಲ್ಲಿ ಬಸ್ ಶೆಲ್ಟರ್ ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಶಾಸಕ ಸಿ.ಎನ್. ಬಾಲಕೃಷ್ಣ ಭರವಸೆ ನೀಡಿದರು. ಪಟ್ಟಣದ ಪ್ರವಾಸಿ ಮಂದಿರದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಸೆಸ್ಕ್, ರಾಷ್ಟ್ರೀಯ ಹೆದ್ದಾರಿ ಗುತ್ತಿಗೆದಾರರ ಸಭೆಯಲ್ಲಿ ಮಾತನಾಡಿ, ಹೆದ್ದಾರಿಯಲ್ಲಿ ಶೇ. 98ರಷ್ಟು ಕಾಮಗಾರಿ ಪೂರ್ಣಗೊಂಡಿದೆ. ವಿದ್ಯುತ್ ದೀಪ ಆನ್ ಮಾಡುವುದು ಮತ್ತು ಬಸ್ ಶೆಲ್ಟರ್ ನಿರ್ಮಾಣ ಸೇರಿ ಸಣ್ಣಪುಟ್ಟ ಕೆಲಸ ಬಾಕಿ ಇದೆ ಎಂದರು.

ಹೆದ್ದಾರಿಯ ಎರಡು ಬದಿಯಲ್ಲಿ ಸರ್ವಿಸ್ ರಸ್ತೆಯಲ್ಲಿರುವ ಕಿರೀಸಾವೆ, ಹಿರೀಸಾವೆ, ಹೆಗ್ಗಡಿಹಳ್ಳಿ, ಮಾದಿಹಳ್ಳಿ, ಮಟ್ಟನವಿಲೆ, ಹೆಚ್. ಹೊನ್ನೇನಹಳ್ಳಿ, ಗೌಡಗೆರೆ, ಮಲ್ಲವನಘಟ್ಟ, ಜೋಗಿಪುರ, ಶೆಟ್ಟಿಹಳ್ಳಿ, ಬರಗೂರು ಹ್ಯಾಂಡ್ ಪೋಸ್ಟ್, ಗುಲಸಿಂದ, ನುಗ್ಗೇಹಳ್ಳಿ ಹ್ಯಾಂಡ್ ಪೋಸ್ಟ್ ಬಳಿ ವಿದ್ಯುತ್ ಕಂಬದಲ್ಲಿ ಬಲ್ಬ್ ಅಳವಡಿಸಲಾಗಿದೆ. ಆದರೆ ಆನ್ ಮಾಡಬೇಕಿದೆ. ಗುಲಸಿಂದ ಹೊರತುಪಡಿಸಿ ಉಳಿದ ಕಡೆ ಕಾಮಗಾರಿ ಪೂರ್ಣಗೊಂಡಿದೆ. ಗುಲಸಿಂದ ಹೊರತುಪಡಿಸಿ ಉಳಿದ ಭಾಗದಲ್ಲಿ ಸದ್ಯದಲ್ಲಿ ಲೈಟ್ ಆನ್ ಮಾಡಲಾಗುವುದು ಎಂದರು.

ಹಿರೀಸಾವೆಯಲ್ಲಿ ವಿದ್ಯುತ್ ವಿತರಣಾ ಕೇಂದ್ರದ ಬಳಿ ಕೇಬಲ್ ಮೇಲ್ಭಾಗದಲ್ಲಿ ಅಳವಡಿಸಲಾಗಿತ್ತು. ಅದನ್ನು ಈಗ ಅಂಡರ್ ಪಾಸ್‌ನಲ್ಲಿ ಅಳವಡಿಸಲಾಗುವುದು. ಅದೇ ರೀತಿ ದಿಡಗ ರಸ್ತೆಯ ವೃತ್ತದಲ್ಲಿ ವಿದ್ಯುತ್ ಪರಿವರ್ತಕ ಅಳವಡಿಸಬೇಕಿದೆ. ಹಿರೀಸಾವೆ, ಶ್ರವಣಬೆಳಗೊಳ ರಸ್ತೆ ಭಾಗ, ರಾಜಾಪುರ ಗೇಟ್, ಬ್ಯಾಡರಹಳ್ಳಿ, ಯಾಳನಹಳ್ಳಿ ಗೇಟ್, ದೊಡ್ಡೇರಿಕಾವಲು ಬಳಿ ಬಸ್ ಶೆಲ್ಟರ್‌ಗಳನ್ನು ರಾಷ್ಟ್ರೀಯ ಹೆದ್ದಾರಿ ವತಿಯಿಂದ ನಿರ್ಮಿಸಲಾಗುವುದು. ಇದಲ್ಲದೇ ಅವಶ್ಯಕತೆ ಇರುವ ಕಡೆ ಬಸ್ ಶೆಲ್ಟರ್ ನಿರ್ಮಿಸಬೇಕಿದೆ ಎಂದು ಹೇಳಿದರು.

ಗುಲಸಿಂದ ಬಳಿ ಬೆಂಗಳೂರು ಮಾರ್ಗದಿಂದ ಬಾಗೂರು ರಸ್ತೆಗೆ ಸಂಪರ್ಕ ಕಲ್ಪಿಸುವ 400 ಮೀಟರ್ ರಸ್ತೆ ನಿರ್ಮಿಸಬೇಕಿದೆ. ಅದೇ ರೀತಿ ಬಾಗೂರು ರಸ್ತೆಯಿಂದ ಹಾಸನದ ಕಡೆಗೆ ಸಂಪರ್ಕ ಕಲ್ಪಿಸುವ 500 ಮೀಟರ್ ರಸ್ತೆ ನಿರ್ಮಿಸಲಾಗುವುದು. ಸಾರ್ವಜನಿಕರಿಗೆ ಅನುಕೂಲ ಒದಗಿಸುವ ದೃಷ್ಟಿಯಿಂದ 3 ಕಡೆ ಶುದ್ಧ ಕುಡಿಯುವ ನೀರಿನ ಘಟಕ ಆರಂಭಿಸಬೇಕು ಎಂದು ಗುತ್ತಿಗೆದಾರರ ಗಮನಕ್ಕೆ ತಂದರು.

ಸೆಸ್ಕ್ ಮತ್ತು ಹೆದ್ದಾರಿ ಇಲಾಖೆ ಸಮನ್ವಯದಿಂದ ಕೆಲಸ ಮಾಡುವಂತೆ ತಿಳಿಸಲಾಗಿದೆ. ಇನ್ನು 20 ದಿನದ ಬಳಿಕ ಮತ್ತೊಮ್ಮೆ ಅಧಿಕಾರಿಗಳ ಸಭೆ ಕರೆದು ಚರ್ಚಿಸಲಾಗುವುದು ಎಂದರು.

ಸೆಸ್ಕ್ ಕಾರ್ಯಪಾಲಕ ಎಂಜಿನೀಯರ್ ಆರ್. ರತ್ನಾ, ಸಹಾಯಕ ತಾಂತ್ರಿಕ ಎಂಜಿನೀಯರ್ ಎನ್.ಆರ್. ಹರೀಶ್, ಕಿರಿಯ ಎಂಜಿನೀಯರ್ ವೆಂಕಟೇಶ್, ಗುತ್ತಿಗೆದಾರ ಸೋಮಶೇಖರ್ ಇದ್ದರು.

## ಬಸ್ ನಿಲ್ದಾಣಕ್ಕೆ ಶಾಸಕ ಸ್ವರೂಪ್ ದಿಢೀರ್ ಭೇಟಿ



ಹಾಸನ: ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಸಮಸ್ಯೆಗಳು ಹೆಚ್ಚಿರುವ ಕುರಿತು ಸಾರ್ವಜನಿಕರಿಂದ ಕೇಳಿಬಂದ ದೂರು ಹಿನ್ನೆಲೆಯಲ್ಲಿ ಶಾಸಕ ಹೆಚ್.ಪಿ. ಸ್ವರೂಪ್ ಅವರು ಮಂಗಳವಾರ ದಿಢೀರ್ ಭೇಟಿ ಮೂಲಕ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

ಈ ವೇಳೆ ಮಾತನಾಡಿದ ಶಾಸಕ, ಬಸ್ ನಿಲ್ದಾಣದಲ್ಲಿ ಸ್ವಚ್ಛತೆ, ವಾಹನ ನಿಲುಗಡೆಗೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ನಿರ್ದೇಶನ ನೀಡಿದರು. ಬಸ್ ನಿಲ್ದಾಣಕ್ಕೆ ಬರುವ ಬಸ್ಸುಗಳಿಗೆ ವ್ಯವಸ್ಥಿತವಾಗಿ ನಿಲುಗಡೆಗೆ ಸೂಚನೆ ನೀಡಬೇಕು. ಖಾಸಗಿ ವಾಹನಗಳು ನಿಲ್ದಾಣದ ಒಳಗೆ ಬಾರದಂತೆ ಅಧಿಕಾರಿಗಳು ಎಚ್ಚರ ವಹಿಸಬೇಕು. ನಿಲ್ದಾಣ ಪಕ್ಕದಲ್ಲಿರುವ ರಾಜ ಕಾಲುವೆಯಿಂದ ದುರ್ವಾಸನೆ ಬೀರುತ್ತಿದ್ದು ಸಾಂಕ್ರಾಮಿಕ ರೋಗಗಳು ಹರಡುವ ಭೀತಿ ಇದೆ. ರಾಜ ಕಾಲುವೆ ಮೇಲೆ ಸ್ಲ್ಯಾಬ್ ಅಳವಡಿಸಬೇಕು. ರಸ್ತೆ ಗುಂಡಿಗಳನ್ನು ಮುಚ್ಚಬೇಕು ಎಂದು ಸೂಚಿಸಿದರು.

ಬಸ್ ನಿಲ್ದಾಣದಲ್ಲಿ ಸ್ವಚ್ಛತೆಗೆ ಆದ್ಯತೆ ನೀಡಬೇಕು. ಶೌಚಾಲಯಗಳನ್ನು ಶುಚಿಯಾಗಿಟ್ಟುಕೊಳ್ಳಬೇಕು. ಬಸ್ ನಿಲ್ದಾಣದಲ್ಲಿರುವ ಅಂಗಡಿಗಳಲ್ಲಿ ನಿಗದಿತ ದರಕ್ಕಿಂತ ಗ್ರಾಹಕರಿಂದ ಹೆಚ್ಚಿನ ಹಣ ಪಡೆಯುತ್ತಿದ್ದಾರೆ ಎಂಬ ಆರೋಪಗಳಿದ್ದು ಪರಿಶೀಲಿಸಿ ತಪ್ಪಿತಸ್ಥರಿಗೆ ಎಚ್ಚರಿಕೆ ನೀಡಬೇಕು ಎಂದರು.

## ಹೆಚ್ಚುತ್ತಿರುವ ಹೃದಯಾಘಾತ ಪ್ರಕರಣ: ಸಂಸದರ ತುರ್ತು ಸಭೆ

### ಮುಂಜಾಗ್ರತಾ ಕ್ರಮಕ್ಕೆ ಸೂಚನೆ | 2 ವರ್ಷದಲ್ಲಿ 190 ಜನರ ಸಾವು

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಜಿಲ್ಲೆಯಲ್ಲಿ ಯುವಕರು ಮತ್ತು ಮಕ್ಕಳಲ್ಲಿ ಹೃದಯಾಘಾತ ಪ್ರಕರಣ ಹೆಚ್ಚುತ್ತಿದ್ದು ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು ಎಂದು ಸಂಸದ ಶ್ರೇಯಸ್ ಪಟೇಲ್ ಆರೋಗ್ಯ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.

ನಗರದ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ಹಿಮ್ಸ್) ಯಲ್ಲಿ ಮಂಗಳವಾರ ಅಧಿಕಾರಿಗಳ ಸಭೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ, ಕಳೆದ ಎರಡು ವರ್ಷಗಳಲ್ಲಿ ಜಿಲ್ಲೆಯಲ್ಲಿ 507 ಹೃದಯಾಘಾತ ಪ್ರಕರಣ



ವರದಿಯಾಗಿದ್ದು, 190 ಸಾವು ಸಂಭವಿಸಿವೆ.

ಇದು ತಕ್ಷಣದ ಗಮನಹರಿಸಬೇಕಾದ ಗಂಭೀರ ಸಂಗತಿ ಎಂದು ಹೇಳಿದರು.

ಕೋವಿಡ್ ಲಸಿಕೆ ಮತ್ತು ಹೃದಯಾಘಾತ ಪ್ರಕರಣಗಳ ಹೆಚ್ಚಳದ ನಡುವೆ ಸಂಬಂಧವಿದೆಯೇ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿ, ಲಸಿಕೆ ನೀಡಿ ಎರಡು ವರ್ಷಗಳಾಗಿವೆ.

ಸದ್ಯಕ್ಕೆ ಇದರ ಬಗ್ಗೆ ಯಾವುದೇ ನಿರ್ದಿಷ್ಟವಾದ ಅಥವಾ ಅಧಿಕೃತ ಮಾಹಿತಿಯಿಲ್ಲ. ಅನಗತ್ಯ ಗೊಂದಲಗಳಿಗೆ ದಾರಿ ಮಾಡಿಕೊಡುವುದು ಬೇಡಎಂದು ಸ್ಪಷ್ಟಪಡಿಸಿದರು.

ತಂತ್ರಜ್ಞರ ತರಬೇತಿ: ಆರಂಭಿಕ ಹಂತದಲ್ಲಿ ಹೃದಯಾಘಾತ ಪತ್ತೆ ಮತ್ತು ಚಿಕಿತ್ಸೆ ಸಾಮರ್ಥ್ಯವನ್ನು ಹೆಚ್ಚಿಸಲು, ವೈದ್ಯಕೀಯ ತಂತ್ರಜ್ಞರಿಗೆ ವಿಶೇಷ ತರಬೇತಿ ಕಾರ್ಯಕ್ರಮವು ಈ ವಾರದಿಂದ ಪ್ರಾರಂಭವಾಗಲಿದೆ. ಸರ್ಕಾರದ ಅನುದಾನ ಲಭ್ಯತೆಯನ್ನು ಅವಲಂಬಿಸಿ, ಮುಂದಿನ ದಿನಗಳಲ್ಲಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಹೃದಯ ತಪಾಸಣಾ ಶಿಬಿರ ನಡೆಸಲು ಯೋಜನೆ ರೂಪಿಸಲಾಗಿದೆ. ಇದರಿಂದ ಹೆಚ್ಚು ಜನರನ್ನು ಅದರಲ್ಲೂ ವಿಶೇಷವಾಗಿ ಹಿಂದುಳಿದ ಪ್ರದೇಶಗಳಲ್ಲಿ ತಲುಪುವ ಗುರಿ ಹೊಂದಿದೆ ಎಂದು ತಿಳಿಸಿದರು.

ರೋಗ ನಿರೋಧಕ ಕ್ರಮಗಳ ಬಗ್ಗೆ ಜನರಿಗೆ ಶಿಕ್ಷಣ ನೀಡಬೇಕು. ನಾಗರಿಕರು ಆರೋಗ್ಯಕರ ಜೀವನಶೈಲಿ ಅಳವಡಿಸಿಕೊಳ್ಳುವಂತೆ ಅವರು ಸಲಹೆ ನೀಡಿದರು.

ಹಿಮ್ಸ್ ನಿರ್ದೇಶಕ ಡಾ. ಬಿ. ರಾಜಣ್ಣ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಅನಿಲ್, ಜಿಲ್ಲಾ ಶಸ್ತ್ರ ಚಿಕಿತ್ಸಕ ಡಾ. ನಾಗಪ್ಪ ಮತ್ತಿತರರಿದ್ದರು.

## ಮಳೆ: ಕಾಲುಜಾರಿ ಬಿದ್ದು ಕಾರ್ಮಿಕ ಸಾವು

ಅರಸೀಕೆರೆ: ತಾಲ್ಲೂಕಿನ ಕೆ.ಜಿ.ಕಟ್ಟೆ ಹೊಸೂರು ಗ್ರಾಮದ ಜಮೀನಿನಲ್ಲಿ ಶುಂಠಿ ಮಂಕರಿ ಹೊತ್ತು ಹೋಗುತ್ತಿದ್ದಾಗ ಕಾರ್ಮಿಕ ಬದುವಿನ ಮೇಲೆ ಕಾಲು ಜಾರಿ ಬಿದ್ದು ಮೃತಪಟ್ಟಿದ್ದಾರೆ. ಗಂಭೀರ ಗಾಯಗೊಂಡಿದ್ದ ಕಾರ್ಮಿಕ ಚಿಕಿತ್ಸೆ ಫಲಿಸದೆ ಮೃತಪಟ್ಟಿರುವ ಘಟನೆ ನಡೆದಿದೆ. ತಾಲ್ಲೂಕಿನ ಕೆಳ್ಳಗೆರೆ ಭೋವಿ ಕಾಲೋನಿಯ ಸಂತೋಷ್ (32) ಮೃತರು. ಕಳೆದ ಎರಡು ವರ್ಷಗಳಿಂದ ಬನ್ನಿಮರದಹಟ್ಟಿ ಗ್ರಾಮದ ಹರೀಶ್ ಕುಮಾರ್ ಅವರ ಹತ್ತಿರ ಶುಂಠಿ ಕೆಲಸಕ್ಕೆ ಹೋಗುತ್ತಿದ್ದ. ಜೂ. 14ರಂದು ಜಾವಗಲ್ ಹೋಬಳಿ ಕೆ.ಜಿ.ಕಟ್ಟೆ ಹೊಸೂರು ಗ್ರಾಮದ ವಸಂತ್ ಅವರ ಜಮೀನಿನಲ್ಲಿ ಶುಂಠಿ ಕಿತ್ತು ಮಂಕರಿಗೆ ತುಂಬಿಸಿಕೊಂಡು ಹೊತ್ತು ಸಾಗುತ್ತಿದ್ದಾಗ ಬದು ಏರುತ್ತಿದ್ದಾಗ ಆಯತಪ್ಪಿ ಶುಂಠಿ ಸಮೇತ ಬಿದ್ದಿದ್ದಾರೆ. ಜೋರು ಮಳೆ ಹಿನ್ನಲೆಯಲ್ಲಿ ಕಾಲು ಜಾರಿ ಅವಘಡ ಸಂಭವಿಸಿದೆ. ಬೆನ್ನು ಹಾಗೂ ಕತ್ತಿನ ಭಾಗಕ್ಕೆ ತೀವ್ರ ಗಾಯವಾದ ಹಿನ್ನೆಲೆಯಲ್ಲಿ ಹಿಮ್ಸ್‌ಗೆ ದಾಖಲಿಸಲಾಗಿತ್ತು. ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿತ್ತಾದರೂ ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾರೆ.

## ಕೊಲೆ ಮಾಡಲು ಜೊತೆಗೆ ಬಾರದ್ದಕ್ಕೆ ಮಚ್ಚೇಟು

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಜಾಮೀನು ಕೊಡಿಸುತ್ತೇನೆಂದರೂ ಕೊಲೆ ಮಾಡಲು ತನ್ನೊಂದಿಗೆ ಬರಲಿಲ್ಲವೆಂದು ಸ್ನೇಹಿತನ ಮೇಲೆ ಮಚ್ಚಿನಿಂದ ಮಾರಣಾಂತಿಕ ಹಲ್ಲೆ ಮಾಡಿರುವ ಘಟನೆ ತಡವಾಗಿ ಬೆಳಕಿಗೆ ಬಂದಿದೆ.

30 ಸಾವಿರ ರೂ. ಹಣ ಕೊಡಲಿಲ್ಲ ಹಾಗೂ ಕೊಲೆ ಮಾಡಲು ತನಗೆ ಬೆಂಬಲ ನೀಡುತ್ತಿಲ್ಲವೆಂದು ನಗರದ ಪಿ.ಜಿ. ಬಾರ್‌ನಲ್ಲಿ ಜೂ. 15 ರಂದು ತಣ್ಣೀರುಹಳ್ಳದ ಸುನಿಲ್ ಎಂಬಾತನ ಮೇಲೆ ವಿಜಯ್ ಹಾಗೂ ಸುಮಂತ್, ರಿಜ್ವಾನ್, ಚಂದ್ರ ಎಂಬುವವರು ಹಲ್ಲೆ ಮಾಡಿದ್ದಾರೆ. ಬಾರ್ ಮುಂದೆ ಮಚ್ಚಿನಿಂದ ಹಲ್ಲೆ ನಡೆಸಿರುವ ವಿಡಿಯೋ ಸಿಸಿಟಿವಿ ಕ್ಯಾಮರಾದಲ್ಲಿ ಸೆರೆಯಾಗಿದೆ.

ಜೂ. 14ರಂದು ಸುನಿಲ್‌ನನ್ನು ಭೇಟಿಯಾಗಿದ್ದ ವಿಜಯ್ ತುರ್ತಾಗಿ 30 ಸಾವಿರ ರೂ. ಬೇಕು ಯಾರ ಬಳಿಯಾದರೂ ಕೊಡಿಸು ಎಂದಿದ್ದ. ಆದರೆ ಸುನಿಲ್‌ನು ಹಣವಿಲ್ಲ ಇನ್ನೊಬ್ಬರ ಹತ್ತಿರ ಸಾಲ ಪಡೆಯುವುದಿಲ್ಲ ಎಂದು ಸಹಾಯ ಮಾಡಿರಲಿಲ್ಲ. ಇದೇ ದ್ವೇಷ



ಇಟ್ಟುಕೊಂಡಿದ್ದ ವಿಜಯ್ ಭಾನುಬಾರ ರಾತ್ರಿ 9.15ರ ಸಮಯದಲ್ಲಿ ಪಿಜಿಆರ್ ಬಾರ್ ಮುಂದೆ ನಿಂತಿದ್ದಾಗ ಸುನಿಲ್ ಜೊತೆಗೆ ವಾಗ್ವಾದ ಶುರು ಮಾಡಿದ್ದಾನೆ. ಇತ್ತೀಚೆಗೆ ನನ್ನ ಸಹವಾಸ ಬಿಟ್ಟಿದ್ದಿಯ. ನಾನು ಹೇಳಿದ ಕೆಲಸ ಮಾಡುತ್ತಿಲ್ಲವೆಂದು ಅವಾಚ್ಯ ಶಬ್ದಗಳಿಂದ ನಿಂದಿಸಿ ಗೆಳೆತನಕ್ಕೆ ಕಳಂಕ ತಂದಿದ್ದೀಯ ಎಂದು ಬೈಯುತ್ತಾ ಮಚ್ಚಿನಿಂದ ಹಲ್ಲೆ ನಡೆಸಿದ್ದಾನೆ.

ಮಚ್ಚಿನೇಟು ಸುನಿಲ್‌ನ ಎಡಗೈ ಹಾಗು ಕೆನ್ನೆಗೆ ಬಿದ್ದಿದೆ. ವಿಜಯ್‌ಗೆ ಬೆಂಬಲವಾಗಿ ರಿಜ್ವಾನ್, ಸುಮಂತ್ ಹಾಗೂ ಚಂದ್ರ ಸಹ ಬಂದಿದ್ದರು. ಅವರು ಯಾವಾಗ ಬೇಕಾದರೂ ನನ್ನ ಕೊಲೆಗೆ ಯತ್ನಿಸಬಹುದು. ಅವರಿಂದ ರಕ್ಷಣೆ ನೀಡಬೇಕು ಹಾಗು ಅವರ ವಿರುದ್ಧ ಕ್ರಮ ಜರುಗಿಸಬೇಕು ಎಂದು ಸುನಿಲ್ ನಗರ ಠಾಣೆಯಲ್ಲಿ ದೂರು ದಾಖಲಿಸಿದ್ದಾನೆ.

ಈ ಬಗ್ಗೆ ಮಾತನಾಡಿರುವ ಗಾಯಾಳು ಸುನಿಲ್, ನಮ್ಮ ಹಾಗೂ ವಿಜಯ್ ಮನೆ ಹತ್ತಿರದಲ್ಲೇ ಇದ್ದು ನಿತ್ಯ ಮನೆಗೆ ಬಂದು ನನ್ನನ್ನು ಕರೆದುಕೊಂಡು ಹೋಗುತ್ತಾನೆ. ಇಬ್ಬರನ್ನು ಕೊಲ್ಲಬೇಕು, ಆ ಸಮಯದಲ್ಲಿ ನೀನು ನನ್ನ ಜೊತೆಗಿರಬೇಕು. ನಿನಗೆ ಜಾಮೀನು ಕೊಡಿಸುವ ಜವಾಬ್ದಾರಿ ನನ್ನದು. ನನ್ನ ಜೊತೆ ಇದ್ದರೆ ರಾಜನ ಹಾಗೆ ನೋಡಿಕೊಳ್ತಿನಿ ಎಂದು ನಿತ್ಯ ಹಿಂಸೆ ನೀಡುತ್ತಿದ್ದ ಎಂದು ಗಾಯಾಳು ಸುನಿಲ್ ಆರೋಪಿಸಿದ್ದಾನೆ.

ವಿಜಯ್, ರಿಜ್ವಾನ್, ಚಂದ್ರ ಹಾಗು ಸುಮಂತ್‌ನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಪ್ರಕರಣ ಗೊತ್ತಾಗುತ್ತಿದ್ದಂತೆ ಶೋಧ ನಡೆಸಿದ್ದ ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ತಿಳಿದುಬಂದಿದೆ.

# ಕನಸುಗಳೇ ಇಲ್ಲದ ಜನಪ್ರತಿನಿಧಿಗಳಿಂದ ಅಭಿವೃದ್ಧಿಗೆ ಹೊಡೆತ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್




ಹಾಸನ: ಜಾಗತಿಕ ತಾಪಮಾನ ತಡೆಯುವ ನಿಟ್ಟಿನಲ್ಲಿ ಸಂಸದರು, ಶಾಸಕರಿಗೆ ಹೆಚ್ಚಿನ ಜ್ಞಾನ, ದೂರದೃಷ್ಟಿ ಇರಬೇಕು. ದುರದೃಷ್ಟವಶಾತ್ ನಮ್ಮ ಸಂಸತ್ತಿನಲ್ಲಿ ಕನಸುಗಳೇ ಇಲ್ಲದ, ಭವಿಷ್ಯದ ಕಣ್ಣೋಟವೇ ಇಲ್ಲದ ಜನರು ತುಂಬಿರುವುದರಿಂದ ಇದನ್ನೆಲ್ಲ ನಿರೀಕ್ಷಿಸುವುದು ಅಸಾಧ್ಯ ಎಂದು ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿ, ಮುಖ್ಯಸ್ಥ ಡಾ. ರಾಜೇಗೌಡ ಅವರು ತಿಳಿಸಿದರು.

ಕಂದಲಿಯಲ್ಲಿ ಭಾರತ ಜ್ಞಾನ ವಿಜ್ಞಾನ ಸಮಿತಿ ಜಿಲ್ಲಾ ಸಮಿತಿ 2 ದಿನಗಳ ಕಾಲ ಆಯೋಜಿಸಿದ್ದ ವೈಜ್ಞಾನಿಕ ನಾಯಕತ್ವ ವ್ಯಕ್ತಿತ್ವ ವಿಕಸನ ಶಿಬಿರ ಉದ್ಘಾಟಿಸಿ, ಪರಿಸರ ಮತ್ತು ಬದುಕು ಕುರಿತು ಮಾತನಾಡಿದ ಅವರು, ಜಾಗತಿಕ ತಾಪಮಾನ ಏರಿಕೆಯಿಂದ ಉಂಟಾದ ಹವಾಮಾನ ಬದಲಾವಣೆಯ ಜಾಗತಿಕ ಪರಿಸರದ ತುರ್ತು ಪರಿಸ್ಥಿತಿಗೆ ಮೊದಲು ತಲೆದಂಡವಾಗುವುದೇ ರೈತ ಸಮುದಾಯ ಎಂದರು.

ಕಾಫಿ, ಏಲಕ್ಕಿಗಳಿಗೆ ಉಷ್ಣತೆ 29 ಡಿಗ್ರಿಗಿಂತ ಹೆಚ್ಚಾದರೆ ಹಾಳಾಗುತ್ತವೆ. ಜಿಲ್ಲೆಯ ಪ್ರಮುಖ ಬೆಳೆ ತೆಂಗು ಇದರ ಉಷ್ಣತೆ 45 ಡಿಗ್ರಿಗಿಂತ ಹೆಚ್ಚಾದರೆ ಹೂವೇ ನಿಲ್ಲುವುದಿಲ್ಲ. ಹಾಗಾಗಿ ಉತ್ತರ ಕರ್ನಾಟಕದ ಭಾಗಗಳಲ್ಲಿ ತೆಂಗು ಬೆಳೆಯುವುದಿಲ್ಲ. ರಾಗಿ, ತರಕಾರಿಗಳೂ ಕೂಡ 40 ಡಿಗ್ರಿ ಉಷ್ಣಾಂಶ ದಾಟಿದರೆ ಕುಡಿಯೊಡೆಯುವುದೇ ಇಲ್ಲ. ಈಗಿನ ಭೂತಾಪಮಾನ ಮಲೆನಾಡಿನಲ್ಲೂ 40 ಡಿಗ್ರಿ ದಾಟುತ್ತಿದೆ. ಹೀಗಾದರೆ ಆಹಾರ ಬೆಳೆ ಬೆಳೆಯಲು ಹೇಗೆ ಸಾಧ್ಯ. ಕೃಷಿ ಸಮುದಾಯ ಬದುಕಲು ಆಗುತ್ತದೆಯೇ ಎಂದು ಪ್ರಶ್ನಿಸಿದರು.

ಜಾಗತಿಕವಾಗಿ ಆಹಾರದ ಬಿಕ್ಕಟ್ಟು, ಕುಡಿವ ನೀರಿನ ಹಾಹಾಕಾರ ಈಗಾಗಲೇ ಭುಗಿಲೇಳುತ್ತಿದೆ. ದುಡಿವ ಜನರ ಬದುಕು ಈ ತಾಪಮಾನ ಏರಿಕೆಯ ಪರಿಣಾಮದಿಂದ ತತ್ತರಿಸಿ ಹೋಗುತ್ತಿದೆ. ಇದನ್ನೆಲ್ಲ ನಿಯಂತ್ರಿಸಿ ಭೂಮಿಯನ್ನು ದುಡಿವ ಜನರ ಯೋಗ್ಯಕ್ಕೆ ಅವಕಾಶ ಕಲ್ಪಿಸಿಕೊಡಬೇಕಾದದ್ದು ರಾಜಕೀಯ ವ್ಯವಸ್ಥೆಯು, ನೀತಿ ನಿರೂಪಣೆ ಮಾಡುವವರು ಸಂಸದರು, ಶಾಸಕರು ಆಗಿರುವುದರಿಂದ ಅವರಿಗೆ ಜ್ಞಾನವಿರಬೇಕು ಹಾಗೂ ಮುಂದಿನ ನೂರು ವರ್ಷಗಳ ಮುನ್ನೋಟ ಇರಬೇಕು. ದುರಾದೃಷ್ಟವಶಾತ್ ನಮ್ಮ ಸಂಸತ್ತಿನಲ್ಲಿ ಕನಸುಗಳೇ ಇಲ್ಲದ, ಭವಿಷ್ಯದ ದೂರದೃಷ್ಟಿಯೇ ಇಲ್ಲದ ಜನರು ತುಂಬಿಹೋಗಿರುವುದರಿಂದ ಇದನ್ನೆಲ್ಲ ನಿರೀಕ್ಷಿಸುವುದು ಕಷ್ಟವಾಗಿದೆ ಎಂದು ವಿಷಾದ ವ್ಯಕ್ತಪಡಿಸಿದರು.

ಜನತೆಯೇ ಈ ಅರಿವನ್ನು ಜನಪ್ರತಿನಿಧಿಗಳಿಗೆ ನೀಡಬೇಕು. ಹಾಗಾಗಿ ಬಿಜಿವಿಎಸ್ ನಂತಹ ಸಂಸ್ಥೆಗಳು ಜನತೆಗೆ ಪರಿಸರ ಪಾಠವನ್ನು ಸರಳವಾಗಿ ವಿವರಿಸಬೇಕು. ಈ ನಿಟ್ಟಿನಲ್ಲಿ ಎಲ್ಲೆಂದರಲ್ಲಿ ಬೆಂಕಿ ಹಾಕುವ, ಕಸತಂದು ನೈರ್ಮಲ್ಯ ಹಾಳು ಮಾಡಿದರೆ, ಖಾಯಿಲೆಗೆ ತಾವೇ ತುತ್ತಾಗುವ ಅರಿವು ಮೂಡಿಸಬೇಕು. ಆ ಮೂಲಕ ದೊಡ್ಡ ಪ್ರಮಾಣದ ಬದಲಾವಣೆಗೆ ನಮ್ಮನು ಆಳುವವರನ್ನು ಎಚ್ಚರಿಸುವ ಆಂದೋಲನ ನಡೆಸುವ ನೈತಿಕ ಸ್ಥೈರ್ಯ ನೀಡಬೇಕು. ಭಾರತದ ವೈವಿಧ್ಯತೆ, ಭಾರತದ ಸಾಂಸ್ಕೃತಿ, ಭಾರತದ ಪರಿಸರ ಸಂಪತ್ತನ್ನು ಜನರಿಗೆ ಅರ್ಥಮಾಡಿಸಿ ಅದನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಬಿಜಿವಿಎಸ್ ತನ್ನ ಕಾರ್ಯಕರ್ತರಿಗೆ ಸೂಕ್ತ ತರಬೇತಿ ನೀಡಿ ಜನರ ನಡುವೆ ಬಹಳ ವರ್ಷಗಳಿಂದ ಕೆಲಸಮಾಡುತ್ತಿರುವುದು ಸ್ಮರಣೀಯ ಎಂದು ಸಮಿತಿ ಕೆಲಸವನ್ನು ಅಭಿನಂದಿಸಿದರು.

ಬಿಜಿವಿಎಸ್ ಜಿಲ್ಲಾ ಕಾರ್ಯದರ್ಶಿ ಚಿನ್ನೇನಹಳ್ಳಿಸ್ವಾಮಿ ಪ್ರಾಸ್ತಾವಿಕವಾಗಿ ಮಾತನಾಡಿ, ಭಾರತದ ಸಂವಿಧಾನ ವೈಜ್ಞಾನಿಕ ಮನೋಭಾವ ಮೂಡಿಸಿಕೊಳ್ಳುವುದು ಮತ್ತು ಮೂಡಿಸುವುದು ನಾಗರಿಕರ ಕರ್ತವ್ಯ ಎಂದಿದೆ. ಆ ಕರ್ತವ್ಯವನ್ನು ಜನರಲ್ಲಿ ಜಾಗೃತಗೊಳಿಸಲು ಸೂಕ್ತ ಕಾರ್ಯಕ್ರಮ, ಸಂವಾದ ತಂತ್ರ, ಹಾಗು ಪರಿಕರಗಳನ್ನು ರೂಪಿಸಿಕೊಳ್ಳುವುದು ಅಗತ್ಯವಿದೆ ಎಂದರು.

ನಂತರ ನಡೆದ ಜನವಿಜ್ಞಾನ ಚಳುವಳಿಯ ಇತಿಹಾಸ ಹಾಗು ಅದರ ಅವಶ್ಯಕತೆ ಕುರಿತು ಪಿಪಿಟಿ ಸಂವಾದದಲ್ಲಿ ಧರ್ಮೇಶ್, ಟಿ.ಎ. ಪ್ರಶಾಂತಬಾಬು, ಅಹಮದ್ ಹಗರೆ, ಹೆಚ್.ಆರ್. ನವೀನ್ ಕುಮಾರ್ ಭಾಗಿಯಾಗಿದ್ದರು. ವಿಜ್ಞಾನ ಬರಹಗಾರ ಕೆ.ಎಸ್.ರವಿಕುಮಾರ್, ಸಂಚಾಲಕ ಹೆಚ್.ಆರ್.ರವೀಶ್, ಬಿಜಿವಿಎಸ್ ಜಿಲ್ಲಾ ಸಮಿತಿ ಉಪಾಧ್ಯಕ್ಷೆ ಪ್ರಮೀಳ, ತಾಲ್ಲೂಕು ಕಾರ್ಯದರ್ಶಿ ಲೋಲಾಕ್ಷಿ ಇದ್ದರು.

# ಡಿಜಿಟಲೀಕರಣಕ್ಕಾಗಿ ಲ್ಯಾಪ್‌ಟಾಪ್ ವಿತರಣೆ



ಬೇಲೂರು: ಕಂದಾಯ ಇಲಾಖೆಯನ್ನು ಸಂಪೂರ್ಣವಾಗಿ ಡಿಜಿಟಲೀಕರಣ ಮಾಡುವ ಉದ್ದೇಶದಿಂದ ಲ್ಯಾಪ್‌ಟಾಪ್ ನೀಡಲಾಗುತ್ತಿದೆ ಎಂದು ಶಾಸಕ ಹೆಚ್. ಕೆ. ಸುರೇಶ್ ಹೇಳಿದರು.

ಪಟ್ಟಣದ ಅಂಬೇಡ್ಕರ್ ಸಮುದಾಯ ಭವನದಲ್ಲಿ ಕಂದಾಯ ಇಲಾಖೆ ವತಿಯಿಂದ ಹಮ್ಮಿಕೊಂಡಿದ್ದ ಪೌತಿ ಖಾತೆ ಆಂದೋಲನ ಹಾಗೂ ಎಲ್ಲಾ ಹೋಬಳಿ, ಗ್ರಾಮ ಆಡಳಿತ ಅಧಿಕಾರಿಗಳಿಗೆ ಲ್ಯಾಪ್ ವಿತರಣೆ ಸಮಾರಂಭದಲ್ಲಿ ಮಾತನಾಡಿ, ಕಂದಾಯ ಇಲಾಖೆಯ ಆಸ್ತಿ, ಭೂದಾಖಲೆಗಳ ನಿರ್ವಹಣೆಗೆ ಸಂಬಂಧಿಸಿ ಸಾರ್ವಜನಿಕ ಸೇವೆಗಳನ್ನು ಪಾರದರ್ಶಕವಾಗಿಡಲು ಅನುಕೂಲವಾಗುತ್ತದೆ. ಜತೆಗೆ ಎಲ್ಲಾ ಕಡತಗಳ ವಿಲೇವಾರಿ ಆನ್ ಲೈನ್ ಮೂಲಕ ಆಗಬೇಕು. ಕೆಲಸ ವಿಳಂಬವಾಗಬಾರದು ಮತ್ತು ದಾಖಲೆಗಳನ್ನು ಕಳೆದು ಹೋಗದಂತೆ ನೋಡಿಕೊಳ್ಳುವ ಉದ್ದೇಶದಿಂದ ಡಿಜಿಟಲೀಕರಣ ಮಾಡಲಾಗುತ್ತಿದೆ. ರೈತರಿಗೆ ಉತ್ತಮ ಸೇವೆ ನೀಡುವುದು ಇದರ ಮುಖ್ಯ ಉದ್ದೇಶ ಎಂದು ಹೇಳಿದರು.

ಡಿಜಿಟಲೀಕರಣದಿಂದ ದಾಖಲೆಗಳ ಅವಶ್ಯಕತೆ ಇದ್ದಾಗ ಸುಲಭವಾಗಿ ಪಡೆಯಬಹುದು. ರೈತರು ವಿನಾಕಾರಣ ಕಚೇರಿಗೆ ಅಲೆಯುವುದು ತಪ್ಪುತ್ತದೆ. ಈ ಯೋಜನೆಯ ಅನುಷ್ಠಾನಕ್ಕಾಗಿ ಕಂಪ್ಯೂಟರ್ ಮತ್ತು ಸ್ಕ್ಯಾನರ್ ಒದಗಿಸುವುದರ ಜತೆಗೆ ನುರಿತ ಸಿಬ್ಬಂದಿಯನ್ನು ನೇಮಿಸಲಾಗಿದೆ ಎಂದು ಹೇಳಿದರು.

ಪೌತಿದಾರರು ಇನ್ನು ಕಚೇರಿಗೆ ಅಲೆಯುವಂತಿಲ್ಲ. ಇಲಾಖಾವಾರು ಅಧಿಕಾರಿಗಳೇ ನಿಮ್ಮ ಮನೆ ಬಾಗಿಲಿಗೆ ಬಂದು ಸಮಸ್ಯೆ ಆಲಿಸಿ ಸೂಕ್ತ ಪರಿಹಾರ ಒದಗಿಸಿಕೊಡುತ್ತಾರೆ. ಹಿಂದೆ ಕಚೇರಿಗೆ ಅಲೆದಾಡಬೇಕಿತ್ತು. ಆದರೆ ಈಗ ಕಂಪ್ಯೂಟರೀಕೃತ ಗಣಕ ನೀಡುವ ಮೂಲಕ ಗ್ರಾಮ ಲೆಕ್ಕಾಧಿಕಾರಿಗಳಿಗೆ ಗ್ರಾಪಂ ಸೇವೆಗಳು ಸುಲಲಿತವಾಗಿ ಕೆಲಸ ನಿರ್ವಹಿಸಲು ಇ ಡಿಜಿಟಲೀಕರಣದಲ್ಲಿ ತಮಗೆ ಸಂಬಂಧಿಸಿದ ದಾಖಲೆಗಳನ್ನು ಶೇಖರಿಸಿಟ್ಟುಕೊಳ್ಳಲು ಅನುಕೂಲವಾಗುತ್ತದೆ. ಇದರಿಂದ ಸಂಬಂಧಿಸಿದ ಪೌತಿದಾರರಿಗೂ ಅನುಕೂಲವಾಗುತ್ತದೆ. ಪೌತಿ ಖಾತಾ ಆಂದೋಲನದ ಮೂಖೇನ ನಿಮ್ಮ ಜಮೀನಿನ ದಾಖಲಾತಿಗಳನ್ನು ಸರಿಪಡಿಸಿಕೊಳ್ಳಿ ಎಂದು ಕಿವಿಮಾತು ಹೇಳಿದರು.

ರೈತರು ವಂಶವೃಕ್ಷ, ಮರಣ ಧೃಢೀಕರಣ ಮುಂತಾದ ದಾಖಲಾತಿ ಸಲ್ಲಿಸಿ ಪೌತಿ ಮಾಡಿಸಿಕೊಳ್ಳಬೇಕು. ವಿಎಗಳಿಗೆ ರೈತರ ಕಾಳಜಿ ಇರಲಿ ಅವರನ್ನು ಅಲೆಸದೆ ಅವರ ಕೆಲಸ ಮಾಡಿಕೊಡಿ.

ಹಳೇಬೀಡಿನ ಬಿದರಿಕೆರೆ ಉಳಿಸುವ ಪ್ರಯತ್ನಕ್ಕೆ ತಹಶಿಲ್ದಾರ್ ಎಂ. ಮಮತಾ ಕಾಯಕಲ್ಪ ನೀಡಿದ್ದು ಅವರ ಕಾರ್ಯಕ್ಕೆ ಶಾಸಕರು ಶ್ಲಾಘನೆ ವ್ಯಕ್ತಪಡಿಸಿದರು.

ತಹಶೀಲ್ದಾರ್ ಎಂ. ಮಮತ ಮಾತನಾಡಿ, ಇನ್ನು ಬಗರ್ ಹುಕುಂ ಮೊದಲ ಹಂತದಿಂದ ಪ್ರತಿ ಹಂತಗಳಲ್ಲಿ ಸಭೆಗಳನ್ನು ನಡೆಸುತ್ತಿದ್ದು ರಾಜ್ಯದಲ್ಲೇ ಮೊದಲನೆಯದಾಗಿ ಒಳ್ಳೆ ಕೆಲಸ ಮಾಡುತ್ತಿದ್ದು ನಮ್ಮ ಸಿಬ್ಬಂದಿ ನಿಷ್ಠಾವಂತರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ.

# ಮುರಾರ್ಜಿ ದೇಸಾಯಿ ವಸತಿ ಶಾಲೆ ಆರಂಭ: ಮುಖಂಡರ ಭೇಟಿ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ತಾಲ್ಲೂಕಿನ ಸೋಮವಾರ ಸಂತೆ ಬಳಿ ನಿರ್ಮಾಣಗೊಂಡಿರುವ ಮೂರಾರ್ಜಿ ದೇಸಾಯಿ ಬಾಲಕರ ಹಾಗೂ ಬಾಲಕಿಯರ ವಸತಿ ಶಾಲೆ ಹಲವಾರು ಅಡ್ಡಿ ಆತಂಕಗಳ ಮೆಟ್ಟಿ ನಿಂತು ಆರಂಭಗೊಂಡಿದ್ದು ಪಾಲಕರು ಹಾಗೂ ವಿದ್ಯಾರ್ಥಿಗಳು ಸಂತಸ ವ್ಯಕ್ತಪಡಿಸಿದ್ದಾರೆ.

ಈ ವರ್ಷದಿಂದ ಕಾರ್ಯಾರಂಭ ಮಾಡಿರುವ ಶಾಲೆಗೆ ಜಿಲ್ಲಾ ದಲಿತಪರ ಸಂಘಟನೆಗಳ ಮುಖಂಡರು ಮಂಗಳವಾರ ಭೇಟಿ ನೀಡಿ ಅಲ್ಲಿನ ವ್ಯವಸ್ಥೆ ಪರಿಶೀಲಿಸಿದರು.

ಶಾಲೆಯ ಕಟ್ಟಡ ಹಾಗೂ ಮೂಲಸೌಲಭ್ಯದ ಕುರಿತು ಶಾಲೆಯ ವಿದ್ಯಾರ್ಥಿಗಳು ಹಾಗೂ ಪೋಷಕರು ಪ್ರಶಂಸೆ ವ್ಯಕ್ತಪಡಿಸಿದರು. ಸುತ್ತಲಿನ ವಿದ್ಯಾರ್ಥಿಗಳಿಗೆ ಗೂರಮಾರನಹಳ್ಳಿ ಶಾಲೆಯೊಂದೆ ಆಸರೆಯಾಗಿತ್ತು. ಹೀಗಾಗಿ ಅನೇಕ ಮಕ್ಕಳು ವಸತಿ ಶಾಲೆಯಿಂದ ವಂಚಿತರಾಗುತ್ತಿದ್ದರು. ಹೊಸ ವಸತಿ ಶಾಲೆಯಿಂದ ಮಕ್ಕಳು ವಿದ್ಯಾವಂತರಾಗುವ ಅವಕಾಶ ಸಿಕ್ಕಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಡಾ. ಬಾಬು ಜಗಜೀವನ್ ರಾಮ್ ಸಂಘಟನೆ ಜಿಲ್ಲಾಧ್ಯಕ್ಷ ಹೆಚ್.ಡಿ. ಶಂಕರ್ ರಾಜ್ ಮಾತನಾಡಿ, ಮುರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಸಕಲ ವ್ಯವಸ್ಥೆ ಕಲ್ಪಿಸಲಾಗಿದೆ. ಜಿಲ್ಲಾಧಿಕಾರಿ ಅವರ ಮಾರ್ಗದರ್ಶನದಂತೆಯೇ ಕಟ್ಟಡ ರೂಪುಗೊಂಡಿದೆ ಎಂದು ಮೆಚ್ಚುಗೆ ಸೂಚಿಸಿದರು. 2017ನೇ ಸಾಲಿನಲ್ಲಿ ಕಟ್ಟಡಕ್ಕೆ ಭೂಮಿಪೂಜೆ ನೆರವೇರಿಸಲಾಗಿತ್ತು. 4 ವರ್ಷಗಳಲ್ಲಿ ಕಾಮಗಾರಿ ಸಂಪೂರ್ಣಗೊಂಡಿತ್ತು. ಆದರೆ ಕೋವಿಡ್ ಹಿನ್ನೆಲೆಯಲ್ಲಿ ಶಾಲೆ ಪ್ರಾರಂಭ ಸಾಧ್ಯವಾಗಿರಲಿಲ್ಲ. ನಂತರ ವಸತಿ ಶಾಲೆಯ ಅಕ್ಕಪಕ್ಕದ ಭೂ ಮಾಲೀಕರು ಕಾಂಪೌಂಡ್ ಸೇರಿ ವಿವಿಧ ಕಾಮಗಾರಿ ನಡೆಸದಂತೆ ಅಡ್ಡಿಪಡಿಸಿದ ಹಿನ್ನಲೆಯಲ್ಲಿ ಕಾರ್ಯಾರಂಭಕ್ಕೆ ಹಿನ್ನಡೆಯಾಗಿತ್ತು. ಈ ಬಗ್ಗೆ ಜಿಲ್ಲಾಧಿಕಾರಿ ಅವರ ಗಮನಕ್ಕೆ ತಂದ ಪರಿಣಾಮ, ಏಪ್ರಿಲ್‌ನಲ್ಲಿ ಜಿಲ್ಲಾಧಿಕಾರಿ ಸಿ. ಸತ್ಯಭಾಮ ಹಾಗು ಕ್ರೈಸ್ ಅಧಿಕಾರಿಗಳು ವಸತಿ ಶಾಲೆಗೆ ಭೇಟಿ ನೀಡಿ ಭೂ ಮಾಲೀಕರೊಂದಿಗೆ ಚರ್ಚಿಸಿ ಸಮಸ್ಯೆ ಬಗೆಹರಿಸಿದ್ದರು. ಆದ್ದರಿಂದಲೇ ಈಗ ಶಾಲೆ ಆರಂಭವಾಗಿದೆ ಎಂದರು.

ವಸತಿ ಶಾಲೆ ಪ್ರಾಂಶುಪಾಲರಾದ ಸಂಚಿತ, ದಲಿತ ಸಂಘರ್ಷ ಸಮಿತಿ ಮೈಸೂರು ವಿಭಾಗದ ಸಂಚಾಲಕ ಭಾಸ್ಕರ್ ಜಾಜೂರು, ಡಾ. ಬಾಬು ಜಗಜೀವನ್ ರಾಮ್ ಸಂಘಟನೆ ತಾಲ್ಲೂಕು ಅಧ್ಯಕ್ಷ ಶ್ರೀನಿವಾಸ್, ನಗರ ಘಟಕದ ಅಧ್ಯಕ್ಷ ಪುನೀತ್, ಆಲೂರು ತಾಲ್ಲೂಕು ಅಧ್ಯಕ್ಷ ಅರಸಪ್ಪ, ಇತರರಿದ್ದರು.

# ಜೆಜೆಎಂ ಕೆಲಸ ಮುಗಿಸಲು 2 ತಿಂಗಳ ಗಡುವು

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್




ಅರಕಲಗೂಡು: ತಾಲ್ಲೂಕಿನ 36 ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 285 ಕೋಟಿ ರೂ. ವೆಚ್ಚದಲ್ಲಿ ಜಲಜೀವನ್ ಮಿಷನ್ ಯೋಜನೆಯಡಿ ಕಾಮಗಾರಿ ಕೈಗೆತ್ತಿಕೊಂಡಿದ್ದು ಎರಡು ತಿಂಗಳ ಒಳಗೆ ನೀರು ಒದಗಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಶಾಸಕ ಎ. ಮಂಜು ಅಧಿಕಾರಿಗಳಿಗೆ ಸೂಚನೆ ನೀಡಿದರು.

ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಜೆಜೆಎಂ ಕಾಮಗಾರಿ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಶೇ. 80 ರಷ್ಟು ಕಾಮಗಾರಿ ಪೂರ್ಣಗೊಂಡಿದೆ ಎಂಬ ಮಾಹಿತಿಯನ್ನು ಸಭೆಗೆ ನೀಡಿದ್ದೀರಿ. ಈ ಅಂಶಗಳನ್ನು ಮನಗಂಡು ಮುಂದಿನ ಎರಡೂವರೆ ತಿಂಗಳ ಒಳಗೆ ನೀರು ಒದಗಿಸುವ ಭರವಸೆಯನ್ನು ನೀಡಿದ್ದೀರಿ. ಇದು ಹುಸಿಯಾದರೇ ಅಧಿಕಾರಿಗಳನ್ನೇ ಹೊಣೆ ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದರು.

ತಾಲ್ಲೂಕಿನ ಎಲ್ಲಾ 36 ಗ್ರಾ.ಪಂ.ಗಳ ವ್ಯಾಪ್ತಿಯ 256 ಗ್ರಾಮ ಮತ್ತು 406 ಜನವಸತಿ ಪ್ರದೇಶದಲ್ಲಿ ಕೆಲಸ ಪ್ರಗತಿಯಲ್ಲಿದೆ. ಅಲ್ಲದೆ ಈಗಾಗಲೇ ಪೂರ್ಣಗೊಂಡಿರುವ ಜೆಜೆಎಂ ಪೈಪ್ ಲೈನ್ ಮುಖಾಂತರ 228 ಜನವಸತಿಗಳಿಗೆ ನೀರು ಸರಬರಾಜು ಮಾಡಲಾಗುತ್ತಿದೆ. 178 ಜನವಸತಿ ಕಾಮಗಾರಿಗಳು ಪ್ರಗತಿಯಲ್ಲಿವೆ ಎಂಬ ಮಾಹಿತಿಯನ್ನು ಅಧಿಕಾರಿಗಳು ಸಭೆಗೆ ನೀಡಿದ್ದಾರೆ. ಕೂಡಲೇ ಬಾಕಿ ಕೆಲಸ ಪೂರ್ಣಗೊಳಿಸಿ ಜನರಿಗೆ ನೀರು ಕೊಡುವ ಕೆಲಸವನ್ನು ಮಾಡಬೇಕೆಂದು ಸೂಚನೆ ನೀಡಿದರು.

ಪಟ್ಟಣ ಪ್ರದೇಶಗಳಂತೆ ಗ್ರಾಮೀಣ ಭಾಗದ ಜನರಿಗೂ ಕೂಡ ಶುದ್ಧ ನೀರು ಸರಬರಾಜು ಮಾಡುವ ಪ್ರಮುಖ ಕಾಮಗಾರಿ ಇದಾಗಿದೆ. ಈ ಸಲುವಾಗಿ ಗ್ರಾ.ಪಂ. ಮಟ್ಟದಲ್ಲಿ ಈ ಹಿಂದೆ ಇದ್ದ ಹಳೆಯ ನೀರಿನ ಟ್ಯಾಂಕ್ ಸೇರಿ 295 ಓವರ್ ಹೆಡ್ ಟ್ಯಾಂಕ್‌ಗಳನ್ನು ನಿರ್ಮಿಸಲಾಗುತ್ತಿದೆ. ಈ ಪೈಕಿ 211 ಟ್ಯಾಂಕ್‌ಗಳ ಕಾಮಗಾರಿ ಪೂರ್ಣಗೊಂಡಿದ್ದು, 116 ಗ್ರಾಮಗಳಿಗೆ ಹೊಸ ಟ್ಯಾಂಕ್‌ಗಳಿಗೆ ನೀರು ತುಂಬಿಸಿ ನೀರನ್ನು ಜೆಜೆಎಂ ಪೈಪ್ ಮೂಲಕ ಕೊಡಲಾಗುತ್ತಿದೆ. 44 ಟ್ಯಾಂಕ್‌ಗಳ ಕಾಮಗಾರಿ ಪ್ರಗತಿಯಲ್ಲಿದ್ದು, 40 ಟ್ಯಾಂಕ್‌ಗಳ ಕೆಲಸ ತಾಂತ್ರಿಕ ಕಾರಣದಿಂದ ಆರಂಭವಾಗಿಲ್ಲ. ಕೂಡಲೇ ಬಾಕಿ ಟ್ಯಾಂಕ್‌ಗಳ ನಿರ್ಮಾಣ ಆಗಬೇಕಿದೆ. ಜಾಗದ ಸಮಸ್ಯೆಯನ್ನು ಬಗೆಹರಿಸಿ ಕೆಲಸ ಆರಂಭಿಸಬೇಕು ಅವರು ತಿಳಿಸಿದರು.

28 ಗ್ರಾಮಗಳಿಗೆ ಹರ್ ಘರ್ ಜಲ್: ಈಗಾಗಲೇ 28 ಗ್ರಾಮಗಳಲ್ಲಿ ಜಲಜೀವನ್ ಮಿಷನ್ ಕಾಮಗಾರಿ ಮುಗಿದಿದೆ. ಮೂಲ ಯೋಜನೆಯಂತೆ ಈ ಗ್ರಾಮಗಳ ಪ್ರತಿ ಮನೆಗಳಿಗೆ ನೀರು ಕೊಡುವ ಮೂಲಕ ಹರ್ ಘರ್ ಜಲ್ ಯೋಜನೆ ಅನುಷ್ಠಾನಗೊಳಿಸಲಾಗಿದೆ ಎಂದರು.

ಸಭೆಯಲ್ಲಿ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಪ್ರಕಾಶ್, ಎಇಇ ನವೀನ್‌ಕುಮಾರ್ ಹಾಗೂ ಇತರರಿದ್ದರು.

## ಸರ್ಕಾರಿ ಶಾಲೆ-ಆಸ್ಪತ್ರೆಗೆ ಸೌಕರ್ಯ ಕಲ್ಪಿಸಿ

ತಾಲ್ಲೂಕಿನ ಎಲ್ಲಾ ಗ್ರಾ.ಪಂ. ವ್ಯಾಪ್ತಿಯಲ್ಲಿ ಸರ್ಕಾರಿ ಶಾಲೆ, ಅಂಗನವಾಡಿ ಕೇಂದ್ರ, ಕಾಲೇಜು ಮತ್ತು ಆಸ್ಪತ್ರೆಗಳಿಗೆ ಕಡ್ಡಾಯವಾಗಿ ಜೆಜೆಎಂ ಸೌಕರ್ಯ ಕಲ್ಪಿಸಬೇಕು. ಇಲ್ಲಿ ಬಳಕೆಯಾಗುವ ನೀರಿನ ತೆರಿಗೆ ಕುರಿತು ಸರ್ಕಾರ ಪರಿಶೀಲನೆ ನಡೆಸಲಿದೆ. ಯಾವ ಕಾರಣಕ್ಕೂ ಪೈಪ್‌ಲೈನ್ ಅಳವಡಿಸುವ ಕೆಲಸ ನಿಲ್ಲಿಸಬಾರದು ಎಂದು ಎಚ್ಚರಿಕೆ ನೀಡಿದರು.

## ರಾಜಕಾಲುವೆ ಸಂರಕ್ಷಿಸಿ

ಪಟ್ಟಣ ಸೇರಿ ತಾಲ್ಲೂಕಿನಾದ್ಯಂತ ರಾಜಕಾಲುವೆಗಳು ಇದ್ದು, ಬಹುತೇಕ ಕಡೆ ಒತ್ತುವರಿದಾರದಿಂದ ಮುಚ್ಚಿ ಹೋಗಿವೆ. ತಾಲ್ಲೂಕಿನ ರಾಮನಾಥಪುರ ಗ್ರಾ.ಪಂ. ವ್ಯಾಪ್ತಿಯ ಮೀನುಗಾರಿಕೆ ಕಚೇರಿ ಪಕ್ಕದಲ್ಲಿನ ರಾಜಕಾಲುವೆಯನ್ನು ಖಾಸಗಿ ವ್ಯಕ್ತಿಯೋರ್ವ ಅತಿಕ್ರಮಣ ಮಾಡಿರುವುದು ಕಂಡುಬಂದಿದೆ. ಇದನ್ನು ಕೂಡಲೇ ತೆರವುಗೊಳಿಸಿ ನೀರು ಮುಂದೆ ಹೋಗಲು ಕ್ರಮಕೈಗೊಳ್ಳಬೇಕೆಂದು ಪಿಡಿಓ ಕುಮಾರಸ್ವಾಮಿಗೆ ಸೂಚನೆ ನೀಡಿದರು.

ಗ್ರಾ.ಪಂ. ವ್ಯಾಪ್ತಿಯಲ್ಲಿ ಜೆಜೆಎಂ ಕಾಮಗಾರಿ ಪೂರ್ಣಗೊಂಡಿರುವ ಕುರಿತು ಗ್ರಾಪಂನಿಂದ ಎನ್‌ಒಸಿ ಪಡೆದೇ ಗುತ್ತಿಗೆದಾರಗೆ ಬಿಲ್ ಪಾವತಿಸಬೇಕು. ಇದನ್ನು ಉಲ್ಲಂಘನೆ ಮಾಡಿದ್ದರೇ ಕ್ರಮ ಜರುಗಿಸಲಾಗುವುದು ಎಂದು ಶಾಸಕ ಎ. ಮಂಜು ಎಚ್ಚರಿಕೆ ನೀಡಿದರು.

# ವಿದ್ಯುತ್ ತಗುಲಿ ಇಬ್ಬರ ಸಾವು

ಅರಸೀಕೆರೆ: ತಾಲ್ಲೂಕಿನ ಗಂಡಸಿ ಹೋಬಳಿ ಶೆಟ್ಟಿಕೊಪ್ಪಲು ಗ್ರಾಮದಲ್ಲಿ ಮಂಗಳವಾರ ವಿದ್ಯುತ್ ಸ್ಪರ್ಶದಿಂದ ಇಬ್ಬರು ಮೃತಪಟ್ಟಿದ್ದಾರೆ.

ಬಟ್ಟೆ ಒಣಹಾಕಲು ಮನೆ ಮುಂದೆ ದಾರ ಕಟ್ಟುವಾಗ ವಿದ್ಯುತ್ ಸ್ಪರ್ಶಿಸಿದೆ. ಗ್ರಾಮದ ಬಾಳೇಗೌಡ (73) ಹಾಗೂ ಕುಡಕುಂದಿಯ ಹೊಂಬೇಗೌಡ (55) ಮೃತರು. ನಿರಂತರ ಮಳೆಯಿಂದ ವಿದ್ಯುತ್ ತಂತಿ ಹಾಗು ನೆಲದ ಮೇಲೆ ತೇವಾಂಶವಿದ್ದರಿಂದ ವೇಗವಾಗಿ ವಿದ್ಯುತ್ ಸ್ಪರ್ಶಿಸಿದೆ. ಬಾಳೇಗೌಡ ಅವರ ತೋಟದ ಮನೆ ಮುಂದೆ ಬಟ್ಟೆ ಒಣ ಹಾಕಲು ದಾರ ಕಟ್ಟಲು ಹೊಂಬೇಗೌಡ ಜೊತೆಗೆ ನಿಂತಿದ್ದರು. ಮನೆಗೆ ಎಳೆದಿದ್ದ ತಂತಿಯಿಂದ ಏಕಾಏಕಿ ವಿದ್ಯುತ್ ಪ್ರವಹಿಸಿದೆ. ಗಂಡಸಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಇತಿಹಾಸದಲ್ಲಿ ಈ ದಿನ

## ಜೂನ್-18

1815: ವಾಟರ್‌ಲೂ ಯುದ್ಧ. ಈ ದಿನ ಬ್ರಿಟನ್ ಮತ್ತು ಪರ್ಶಿಯನ್ ಸೇನೆಗಳು ನೆಪೋಲಿಯನ್ ಬೋನಾಪಾರ್ಟ್ ಅನ್ನು ಸೋಲಿಸಿದ ಮಹತ್ವದ ಯುದ್ಧ. ನಪೋಲಿಯನ್‌ರ ಆಳ್ವಿಕೆಯ ಅಂತ್ಯವಾದ ಕ್ಷಣವೆಂದು ಇದನ್ನು ಪರಿಗಣಿಸಲಾಗುತ್ತದೆ. ಈ ಯುದ್ಧದಲ್ಲಿ ಹಲವಾರು ಭಾರತೀಯ ಸೈನಿಕರು ಬ್ರಿಟಿಷ್ ಸೇನೆಯ ಭಾಗವಾಗಿದ್ದರು.

1946: ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿ ಜವಾಹರಲಾಲ್ ನೆಹರು ಆಯ್ಕೆ.

1972: ಭಾರತೀಯ ಸರ್ಕಾರ ಪಾಶ್ಚಾತ್ಯ ಬ್ಲಾಕ್ ಲಿಸ್ಟ್ ಮಾಡಿತು.

1980: ಭಾರತದಲ್ಲಿ ನಿರೀಕ್ಷಿತ ಮಕ್ಕಳ ಸಾವಿನ ಪ್ರಮಾಣ ಕಡಿಮೆಯಾದ ವರದಿ ಪ್ರಕಟ.

1928: ಅಮೆಲಿಯಾ ಇರ್ಹಾರ್ಟ್ ಅಟ್ಲಾಂಟಿಕ್ ಮಹಾಸಾಗರ ತಿರುಗಿದ ಮೊದಲ ಮಹಿಳೆ. ಆಕೆಯ ಸಾಧನೆ ಮಹಿಳಾ ಹಕ್ಕುಗಳ ಚಳವಳಿಗೆ ಉತ್ತೇಜನ ನೀಡಿತು.

1940: ಫ್ರಾನ್ಸ್ ನಾಜಿ ಜರ್ಮನಿಗೆ ಶರಣು. ಎರಡನೇ ಮಹಾಯುದ್ಧದ ಸಂದರ್ಭದಲ್ಲಿ ಪ್ಯಾರಿಸ್ ಜರ್ಮನ್ ಪಡೆಗಳ ಹಿಡಿತಕ್ಕೆ ಒಳಗಾಯಿತು.

1983: ಅಸ್ಟ್ರೋನಾಟ್ ಸಲ್ಲಿ ರೈಡ್, ಸ್ಪೇಸ್‌ಗೆ ಹೋದ ಮೊದಲ ಅಮೇರಿಕನ್ ಮಹಿಳೆ. ಇದು ನಾಸಾ ಹಾಗೂ ಮಹಿಳಾ ವಿಜ್ಞಾನಿಗಳ ಇತಿಹಾಸದಲ್ಲಿ ಐತಿಹಾಸಿಕ ಬೆಳವಣಿಗೆಯಾಗಿದೆ.

### ಜನನ

1942: ಪಾಲ್ ಮೆಕ್ ಕಾರ್ಟ್ನಿ. ಪ್ರಖ್ಯಾತ ಇಂಗ್ಲಿಷ್ ಸಂಗೀತಗಾರ ಮತ್ತು ಬೀಟಲ್ಸ್ ಸದಸ್ಯ.

1942: ತಿಲಕ ನಾಯಕ್. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದರು.

# ಬೇಡಿಕೆ ಕುಸಿತ: ಟೊಮ್ಯಾಟೊ ದರ ಇಳಿಕೆ




ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಎರಡು ವರ್ಷಗಳ ಹಿಂದೆ ಬಂಗಾರದ ಬೆಲೆ ತಂದುಕೊಟ್ಟ ಕೆಂಪು ರಾಣಿ ಟೊಮ್ಯಾಟೊಗೆ ಈ ವರ್ಷ ಬೇಡಿಕೆ ತುಂಬಾ ಕುಸಿದಿದ್ದು ರೈತರು ಕಂಗಾಲಾಗಿದ್ದಾರೆ.

2023-24ರಲ್ಲಿ ಟೊಮ್ಯಾಟೊ ಬೆಳೆಗಾರರು ಭರ್ಜರಿ ಲಾಭ ಗಳಿಸಿದ್ದರು. ಕೆ.ಜಿ.ಗೆ 80 ರೂ. ತಲುಪಿದ್ದ ಬೆಲೆಯಿಂದ ಸಂತಸಗೊಂಡಿದ್ದ ರೈತರು ಈ ವರ್ಷವೂ ಅದೇ ನಿರೀಕ್ಷೆಯಲ್ಲಿ ಬೆಳೆ ಕೈಗೊಂಡಿದ್ದರು. ಆದರೆ ಬೆಳೆಗಾರರಿಗೆ ಕೇವಲ 4 ರಿಂದ 5 ರೂ. ಮಾತ್ರ ದೊರೆಯುತ್ತಿದ್ದು ಪೂರೈಕೆ ಹೆಚ್ಚಿರುವ ಹಿನ್ನೆಲೆಯಲ್ಲಿ ದಿನದಿಂದ ದಿನಕ್ಕೆ ಬೆಲೆಯಲ್ಲಿ ಭಾರೀ ಇಳಿಕೆಯಾಗುತ್ತಿದೆ.

## ಕೇಳುವವರಿಲ್ಲ ಟೊಮ್ಯಾಟೊ

ನಗರದ ಎಪಿಎಂಸಿ ಪ್ರಾಂಗಣದಲ್ಲಿ ಟೊಮ್ಯಾಟೊ ಕೇಳುವವರೇ ಇಲ್ಲವಾಗಿದ್ದಾರೆ. ನಿತ್ಯ ನಡೆಯುವ ಸಂತೆಯಲ್ಲಿ ಬೆಳಿಗ್ಗೆ 6 ರಿಂದ 8ರ ಅವಧಿಯಲ್ಲಿ ಮಾರುಕಟ್ಟೆಗೆ ಆವಕವಾಗುವ ಎಲ್ಲಾ ಟೊಮ್ಯಾಟೊ ಬಿಕರಿಯಾಗುತ್ತಿತ್ತು. ಆದರೆ ಕಳೆದ ನಾಲ್ಕೈದು ದಿನಗಳಿಂದ ಬೆಳಿಗ್ಗೆ 10 ಗಂಟೆ ವರೆಗೂ ಮಾರಾಟವಾಗದೆ ಹಾಗೆ ಉಳಿಯುತ್ತಿರುವುದನ್ನು ಕಾಣಬಹುದಾಗಿದೆ. ಎಪಿಎಂಸಿಯಲ್ಲಿ 16 ಟೊಮ್ಯಾಟೊ ಮಂಡಿಗಳಿದ್ದು ಒಂದು ಮಂಡಿಗೆ ಕನಿಷ್ಠ ಸಾವಿರ ಚೀಲ ಟೊಮ್ಯಾಟೊ ಬರುತ್ತಿದೆ. ಬೇಡಿಕೆಗಿಂತ ಅಧಿಕ ಪದಾರ್ಥ ಮಾರುಕಟ್ಟೆಗೆ ಲಗ್ಗೆಯಿಡುತ್ತಿರುವುದರಿಂದ ಮಾರಾಟ ಸಾಧ್ಯವಾಗುತ್ತಿಲ್ಲ ಎಂದು ವರ್ತಕರು ಹೇಳುತ್ತಾರೆ. 15 ಕೆ.ಜಿ. ತೂಕದ ಒಂದು ಚೀಲ ಕೇವಲ 60 ರಿಂದ 100 ರೂಪಾಯಿಗೆ ಮಾರಾಟವಾಗುತ್ತಿದೆ. ಗುಣಮಟ್ಟದ ಟೊಮ್ಯಾಟೊ ಚೀಲಕ್ಕೆ 100 ರೂ.ನಂತೆ ಲಭ್ಯವಾಗುತ್ತಿದೆ.

## ಗ್ರಾಹಕರಿಗೆ ಲಾಭವಿಲ್ಲ

ಎಪಿಎಂಸಿಯಲ್ಲಿ ಟೊಮ್ಯಾಟೊ ಕೆ.ಜಿ.ಗೆ 10 ರೂ. ನಂತೆ ಸಿಗುತ್ತಿದೆಯಾದರೂ ತರಕಾರಿ ಅಂಗಡಿಗಳಲ್ಲಿ ಕೆ.ಜಿ.ಗೆ 20 ರೂ. ನಂತೆ ಮಾರಾಟವಾಗುತ್ತಿದೆ. ಹೀಗಾಗಿ ಬೆಲೆ ಇಳಿಕೆಯ ಲಾಭ ಗ್ರಾಹಕರಿಗೆ ಇಲ್ಲವಾಗಿದೆ.

## ನಿರಂತರ ಮಳೆಯಿಂದ ಸಮಸ್ಯೆ

ಜಿಲ್ಲೆಯ ದುದ್ದ, ಗಂಡಸಿ, ಸಾಲಗಾಮೆ, ಅರಸೀಕೆರೆ ಭಾಗದಲ್ಲಿ ಟೊಮ್ಯಾಟೊ ಬೆಳೆಯಲಾಗುತ್ತದೆ. ಲಾಭ ಅಲ್ಲದಿದ್ದರೂ ಬೆಳೆಗೆ ಕೈಗೊಂಡಿರುವ ಖರ್ಚಾದರೂ ಸರಿದೂಗುತ್ತದೆ ಎಂಬ ನಿರೀಕ್ಷೆಯಲ್ಲಿದ್ದ ಬೆಳೆಗಾರರಿಗೆ ಈ ಬಾರಿ ನಿರಾಶೆಯಾಗಿದೆ. ಜಿಲ್ಲೆಯಲ್ಲಿ ಕಳೆದ ನಾಲ್ಕು ದಿನಗಳಿಂದ ಜೋರು ಮಳೆ ಸುರಿಯುತ್ತಿರುವುದರಿಂದ ಟೊಮ್ಯಾಟೊ ಉದುರುತ್ತಿದೆ. ಜೊತೆಗೆ ಹುಳುಗಳ ಕಾಟವೂ ಕಾಡುತ್ತಿದೆ. ಜೋರು ಮಳೆ ಪರಿಣಾಮ ಕೂಲಿ ಕಾರ್ಮಿಕರು ಸಿಗದೆ ಪದಾರ್ಥವನ್ನು ಮಾರುಕಟ್ಟೆಗೆ ಸಾಗಿಸಲು ತೊಡಕಾಗಿದೆ. ಟೊಮ್ಯಾಟೊವನ್ನು ಮಾರುಕಟ್ಟೆಗೆ ಸಾಗಿಸಲು ಮೊದಲಿಗಿಂತ ವೆಚ್ಚ ಹೆಚ್ಚಾಗಿರುವುದರಿಂದ ಲಾಭ ಅಷ್ಟಕ್ಕಷ್ಟೇ ಎಂದು ರೈತರು ಹೇಳುತ್ತಿದ್ದಾರೆ.

# ಪುರಸಭೆ ಸ್ಥಾಯಿ ಸಮಿತಿ ಅಧ್ಯಕ್ಷರಾಗಿ ಗಣೇಶ್ ಆಯ್ಕೆ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ಪುರಸಭೆ ಸ್ಥಾಯಿ ಸಮಿತಿ ಅಧ್ಯಕ್ಷರಾಗಿ 22ನೇ ವಾರ್ಡ್ ಸದಸ್ಯ ಎಸ್.ಎ. ಗಣೇಶ್ ಅವಿರೋಧ ಆಯ್ಕೆಯಾಗಿದ್ದಾರೆ.

ಶಾಸಕ ಸಿ.ಎನ್. ಬಾಲಕೃಷ್ಣ, ಪುರಸಭಾಧ್ಯಕ್ಷ ಸಿ.ಎನ್. ಮೋಹನ್, ಉಪಾಧ್ಯಕ್ಷೆ ರಾಣಿಕೃಷ್ಣ ಸೇರಿ ಜೆಡಿಎಸ್ ಹಾಗೂ ಕಾಂಗ್ರೆಸ್ ಸದಸ್ಯರು ಅಭಿನಂದಿಸಿದರು.

ಪರ್ಹನರೀಜ್ ಅವರ ರಾಜೀನಾಮೆಯಿಂದ ತೆರವಾಗಿ ಸ್ಥಾನಕ್ಕೆ ಚುನಾವಣೆ ಪ್ರಕ್ರಿಯೆ ನಡೆಯಿತು. ಶಾಸಕ ಸಿ.ಎನ್. ಬಾಲಕೃಷ್ಣ ಮಾತನಾಡಿ, ಗಣೇಶ್ ಸಾರ್ವಜನಿಕರೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದು ಪಟ್ಟಣ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ. ಜವಾಬ್ದಾರಿ ಅರಿತು ಕೆಲಸ ಮಾಡಿದರೆ ಅಭಿವೃದ್ಧಿ ಸಾಧಿಸಬಹುದು ಎಂದರು.

ನೂತನ ಸ್ಥಾಯಿ ಸಮಿತಿ ಅಧ್ಯಕ್ಷ ಎಸ್.ಎ. ಗಣೇಶ್ ಮಾತನಾಡಿ, ಸ್ಥಾಯಿ ಸಮಿತಿ ಅಧ್ಯಕ್ಷ ಸ್ಥಾನ ನೀಡಿದ ಕ್ಷೇತ್ರದ ಅಭಿವೃದ್ಧಿ ಹರಿಕಾರ ಸಿ.ಎನ್. ಬಾಲಕೃಷ್ಣ ಮತ್ತು ಅಧ್ಯಕ್ಷರು, ಉಪಾಧ್ಯಕ್ಷರಿಗೆ ಧನ್ಯವಾದ ಸಲ್ಲಿಸುತ್ತೇನೆ. ಹಿಂದುಳಿದ ವರ್ಗದವರನ್ನು ಗುರುತಿಸಿ ಅಧಿಕಾರ ನೀಡಿರುವುದು ಖುಷಿಯ ವಿಚಾರ ಎಂದು ಹೇಳಿದರು.

# ಎತ್ತಿನಹೊಳೆ ವ್ಯಾಪ್ತಿ ಜನರಿಗೆ ಎಚ್ಚರಿಕೆ

ಹಾಸನ: ಜಿಲ್ಲೆಯ ಸಕಲೇಶಪುರ, ಬೇಲೂರು ಹಾಗು ಆಲೂರು ತಾಲ್ಲೂಕು ವ್ಯಾಪ್ತಿಯಲ್ಲಿ ಎತ್ತಿನಹೊಳೆ ಯೋಜನೆಯ ಗುರುತ್ವಾ ಕಾಲುವೆ ಮೂಲಕ ನೀರು ಹರಿಸಲು ಉದ್ದೇಶಿಸಿದ್ದು ಸಾರ್ವಜನಿಕರು ಎಚ್ಚರ ವಹಿಸಲು ಸೂಚಿಸಿದೆ.

ಸರಪಳಿ 0.00 ಕಿ.ಮೀ.ಯಿಂದ 32.550 ಕಿ.ಮೀ. ವರೆಗಿನ ಕಾಮಗಾರಿ ಪೂರ್ಣಗೊಂಡಿದೆ. ಪ್ರಾಯೋಗಿಕವಾಗಿ ನೀರು ಎತ್ತಿ ಗುರುತ್ವಾ ಕಾಲುವೆಗೆ ಬಿಡಲು ಉದ್ದೇಶಿಸಲಾಗಿದೆ. ಅದರಂತೆ ಪ್ರಾಯೋಗಿಕ ಚಾಲನೆಯು ಪ್ರಕ್ರಿಯೆಯಲ್ಲಿದೆ. ಜಿಲ್ಲೆಯಲ್ಲಿ ಸುರಿಯುತ್ತಿರುವ ಭಾರೀ ಮಳೆಯಿಂದ ಗುಡ್ಡ ಪ್ರದೇಶ ಹಾಗೂ ಹೊಲ, ತೋಟಗಳಿಂದ ಹೆಚ್ಚುವರಿ ನೀರು ಎತ್ತಿನಹೊಳೆ ಗುರುತ್ವಾ ಕಾಲುವೆಗೆ ಸೇರುತ್ತಿದೆ. ಹೆಚ್ಚುವರಿ ನೀರನ್ನುಕಾಲುವೆಯಿಂದ ಹೊರ ಹರಿಸಬೇಕಾಗಿರುವುದರಿಂದ ಸರಪಳಿ 32.550 ಕಿ.ಮೀ.ನಲ್ಲಿ ಅಳವಡಿಸಿರುವ ಉತ್ಚಚಟಟಿ ನಿಂದ ಕಾಗೇದಹಳ್ಳ ಮೂಲಕ ವೇದಾವತಿ ನದಿ ಕೊಳ್ಳಕ್ಕೆ ಬಿಡಲು ಉದ್ದೇಶಿಸಲಾಗಿದೆ.

ಈ ಪ್ರದೇಶ ವ್ಯಾಪ್ತಿಯಲ್ಲಿ ದನ-ಕರುಗಳನ್ನು ಕಟ್ಟುವುದಾಗಲಿ, ಸಾರ್ವಜನಿಕರು ಸಂಚರಿಸುವುದಾಗಲಿ ಮಾಡಬಾರದು.

ಈ ಕುರಿತು ನಿರ್ಲಕ್ಷ್ಯಗಳಿಂದ ಅಪಘಾತ ಅಥವಾ ಹಾನಿ ಸಂಭವಿಸಿದರೆ ಅವರೇ ಹೊಣೆಗಾರರು.

ನಿರ್ಲಕ್ಷ್ಯದಿಂದ ಆಗುವ ಅನಾಹುತಗಳಿಗೆ ವಿಶ್ವೇಶ್ವರಯ್ಯ ಜಲ ನಿಗಮ ಜವಾಬ್ದಾರಿಯಲ್ಲ ಎಂದು ಅರಸೀಕೆರೆ ವಿ.ಜ.ನಿ.ನಿ. ಎತ್ತಿನಹೊಳೆ ಯೋಜನಾ ವಿಭಾಗ ಕಾರ್ಯಪಾಲಕ ಎಂಜಿನಿಯರ್ ತಿಳಿಸಿದ್ದಾರೆ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248